# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಮಹಾಪ್ರಸ್ಥಾನ


ಕವಿ

## ಶ್ರೀಧರ ಡಿ. ಎಸ್.



ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦

ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಉಡುಪಿ ಯಕ್ಷಗಾನ ಕೇಂದ್ರ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೦೯

| | |
|---|---|
| ಸಂಧಿ - 1. ರಾಜಾ ಯಯಾತಿ: | ಪದ್ಯ 1 - 53 |
| ಸಂಧಿ - 2. ಶ್ರೀಕೃಷ್ಣಾಶ್ವಮೇಧ: | ಪದ್ಯ 54 - 119 |
| ಸಂಧಿ - 3. ಶ್ರೀಕೃಷ್ಣನಿರ್ಯಾಣ: | ಪದ್ಯ 120 - 186 |
| ಸಂಧಿ - 4. ಯುಗಾಂತರ: | ಪದ್ಯ 187 - 244 |
| ಸಂಧಿ - 5. ಸ್ವರ್ಗಾರೋಹಣ: | ಪದ್ಯ 245 – 309 |

**ಪಾತ್ರಗಳು:**

| | | |
|---|---|---|
| ಸಂಧಿ - 1. ರಾಜಾ ಯಯಾತಿ: | ಯಾಯಾತಿ | ಶುಕ್ರಾಚಾರ್ಯ |
| | ಶರ್ಮಿಷ್ಠೆ | ಯದು |
| | ದೇವಯಾನಿ | ಪುರು |
| ಸಂಧಿ - 2. ಶ್ರೀಕೃಷ್ಣಾಶ್ವಮೇಧ: | ಶ್ರೀಕೃಷ್ಣ | ವಜ್ರದತ್ತ |
| | ಸಾತ್ಯಕಿ | ಕರಾಳಲೋಚನ |
| | ಸಾಂಬ | ಮೇಘಸಂಧಿ |
| | ಯಾದವಬಲ | ದೂತರು |
| ಸಂಧಿ - 3. ಶ್ರೀಕೃಷ್ಣನಿರ್ಯಾಣ: | ಶ್ರೀಕೃಷ್ಣ | ವಜ್ರದೇವ |
| | ಸಾತ್ಯಕಿ | ಜರ |
| | ಕೃತವರ್ಮ | ಜರನ ಹೆಂಡತಿ |
| | ಸಾಂಬ | ಉದ್ಧವ |
| | ಗಾಲವ | ದಾರುಕ |
| | ಬೇಟೆಗಾರರು | ಯಾದವರು |
| ಸಂಧಿ - 4. ಯುಗಾಂತರ: | ಕಲಿಪುರುಷ | ಧರ್ಮರಾಜ |
| | ಕಲಿಬ್ರಾಹ್ಮಣ | ಭೀಮ |
| | ಕಲಿಬ್ರಾಹ್ಮಣನ ಹೆಂಡತಿ | ಅರ್ಜುನ |
| | ಕಲಿಬ್ರಾಹ್ಮಣನ ತಾಯಿ | ನಕುಲ |
| | ದೂತ | ಸಹದೇವ |
| | ದಾರುಕ | ವಜ್ರದೇವ |
| | ಆಭೀರರು (ಕಳ್ಳರು) | ವೇದವ್ಯಾಸ |
| | ಯಾದವರು | ಯಾದವಸ್ತ್ರೀಯರು |

| | | |
|---|---|---|
| ಸಂಧಿ - 5. ಸ್ವರ್ಗಾರೋಹಣ: | ಧರ್ಮರಾಜ | ಧೌಮ್ಯ ಋಷಿ |
| | ಭೀಮ | ಚಿತ್ರಾಂಗದೆ-ಸುಭದ್ರೆ |
| | ಅರ್ಜುನ | ಪುರಜನರು |
| | ನಕುಲ | ಪರಾಶರ |
| | ಸಹದೇವ | ದನು |
| | ದ್ರೌಪದಿ | ದೇವೇಂದ್ರ |
| | ಪರೀಕ್ಷಿತ | ಯಮ |
| | ಬ್ರಾಹ್ಮಣವೇಷದ ಯಮ | |

**ಕಥಾ ಸಾರಾಂಶ:**

'ಮಹಾಪ್ರಸ್ಥಾನ' ಪಾಂಡವಸ್ವರ್ಗಾರೋಹಣದ ಕಥೆಯಾದರೂ – ಯುಗಾಂತರಗಳ - ಯುಗಾಂತರದ ಕಥೆ ಮತ್ತು ನಮ್ಮೆಲ್ಲ ಪುರಾಣಗಳ ಕೊನೆಯ ಕಥೆ. ಮಹಾಭಾರತದ ಆದಿ, ಮುಸಲ, ಸ್ವರ್ಗಾರೋಹಣ ಪರ್ವಗಳಲ್ಲಿ, ಭಾಗವತ ಮತ್ತು ಇತರ ಪುರಾಣಗಳಲ್ಲಿ ಈ ಕಥೆಯ ಮೂಲವಿದೆ. ಪ್ರಸಂಗಪದ್ಯದ ಮೂಲ ಪರಮದೇವ ಕವಿಯ 'ತುರಂಗಭಾರತ'. ಅದರಿಂದ ದನುದಾನವ ಪ್ರಕರಣ, ಪರಾಶರಸೂಚನೆಯಂತಹ ಭಾಗವು ಇಲ್ಲಿ ಸೇರಿದೆ. ರಂಗಕೃತಿಯ ಅನಿವಾರ್ಯಕ್ಕಾಗಿ ಕಲ್ಪನೆಯ ಅಂಶವೂ ಇದೆ. ಸಾತ್ಯಕಿ ದಿಗ್ವಿಜಯ ಪೂರ್ಣ ಕಲ್ಪನೆ. 'ಒಂದು ರಾತ್ರಿಯ ಕೃತಿ' ಎಂಬ ನೆಲೆಯನ್ನಿಟ್ಟು ಬರೆದುದರಿಂದ ವಿಸ್ತಾರವಾದ ಮೂಲಕಥೆಯನ್ನು ಸಂಗ್ರಹಿಸಿ ಹೇಳಲಾಗಿದೆ. ವಿವರಗಳಿಗೆ ಮೂಲವನ್ನು ಗಮನಿಸಬೇಕು ಎಂಬುದಕ್ಕಾಗಿ ಈ ವಿವರಣೆ.

'ರಾಜಾ ಯಾಯಾತಿ', 'ಶ್ರೀಕೃಷ್ಣಾಶ್ವಮೇಧ', 'ಶ್ರೀಕೃಷ್ಣನಿರ್ಯಾಣ', 'ಯುಗಾಂತರ', 'ಸ್ವರ್ಗಾರೋಹಣ' - ಇಲ್ಲಿ ಮಾಡಿಕೊಳ್ಳಲಾದ ಒಳವಿಭಾಗ. ಕಿರು ಅವಧಿಯ ಐದು ಪ್ರತ್ಯೇಕ ಪ್ರಸಂಗಗಳಾಗಿಯೂ ಬಳಸಿಕೊಳ್ಳಬಹುದು. ಈ ಹಿನ್ನೆಲೆಯಿಂದಲೇ ಭೂಮಿಕೆಗಳ ಪರಿಚಯ ಮಾಡಲಾಗಿದೆ.

**ಕವಿ ಪರಿಚಯ:**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು - ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಸುಮಾರು ಮೂವತ್ತೊಂದು ಯಕ್ಷಗಾನ ಪ್ರಸಂಗಗಳ ರಚಯಿತ. ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ.ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ `ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ `ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ `ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ `ಧರ್ಮಭಾರತೀ' ಮಾಸಪತ್ರಿಕೆಯಲ್ಲಿ `ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ `ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ `ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರುವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ `ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. `ಜಡಭರತ' ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, `ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

**ಟಿಪ್ಪಣಿ:**

ಇಲ್ಲಿಯ ದೃಶ್ಯಗಳು ಕರುಣರಸಪ್ರಧಾನವಾಗಿದ್ದು ಹಾಸ್ಯ-ಶೃಂಗಾರಗಳಂತಹ ರಸಗಳಿಗೆ ಪ್ರಾಧಾನ್ಯವಿಲ್ಲದುದರಿಂದ ಯಕ್ಷರಂಗದಲ್ಲಿ ಸೊಗಸಾಗುವ ಭಾಗ ಕಡಿಮೆ ಅನ್ನಿಸಬಹುದು. ಕೃತಿಯ ಗಾಂಭೀರ್ಯ ಕೆಡುವ ಅಪಾಯವಿರುವುದರಿಂದ ಅನಗತ್ಯವಾಗಿ ಈ ರಸಗಳನ್ನು

ಕಲ್ಪಿಸಿಕೊಳ್ಳುವ ಪ್ರಯತ್ನ ಮಾಡಿಲ್ಲ. ಭಾವಪೂರ್ಣ ವಾಚಿಕಾಂಶವಿರುವ, ವಿಸ್ತಾರವಾದ ಪುರಾಣಲೋಕದ ಹಿನ್ನೆಲೆ ಇರುವ ಈ ಕೃತಿ ತಾಳಮದ್ದಲೆಗೆ ಹೆಚ್ಚು ಹೊಂದಿಕೊಳ್ಳುವುದನ್ನು ಪ್ರಯೋಗದಿಂದ ಕಂಡುಕೊಳ್ಳಲಾಗಿದೆ. ಅರ್ಥಧಾರಿಗಳಿಗೆ ಚೆನ್ನಾಗಿ ಅನುವಾಗುವ ಪಾತ್ರಗಳು ಇಲ್ಲಿವೆ. ಭಾವಪ್ರಕಟನೆಯಲ್ಲಿ ಅದ್ವಿತೀಯರೆನಿಸಿದ ಕಲಾವಿದರಿಂದ ಬಯಲಾಟದಲ್ಲೂ ಯಶಸ್ವಿಯಾಗಬಲ್ಲುದು.

ಮಹಾಪ್ರಸ್ಥಾನ ವಿಸ್ತಾರವಾದ ಕಥಾನಕ ಐದು ಅಧ್ಯಾಯಗಳು, ಐವತ್ತಕ್ಕೂ ಹೆಚ್ಚು ಪಾತ್ರಗಳು ವೈವಿಧ್ಯಮಯವಾದ ದೃಶ್ಯಗಳು ಇವುಗಳಿಂದ ಅತ್ಯಂತ ಭಾವಪೂರ್ಣ ಪದ್ಯಗಳಿಂದ ಇಡಿಕಿರಿದ ಪ್ರಸಂಗ. ರಾಜಾಯಯಾತಿ, ಕೃಷ್ಣಾಶ್ವಮೇಧ, ಶ್ರೀಕೃಷ್ಣ ನಿರ್ಯಾಣ, ಯುಗಾಂತರ, ಮಹಾಪ್ರಸ್ಥಾನ ಇವು ಇಲ್ಲಿಯ ವಿಭಾಗಗಳು. ಇಡೀ ಕಥಾನಕಗಳಲ್ಲಿ ಪ್ರಾರಂಭದ ಒಂದನ್ನು ಬಿಟ್ಟು ಬರುವ ಕಥೆ ಪುರಾಣದ ಕೊನೆಯ ಕಥೆಗಳು ಮತ್ತು ದುರಂತ ಕಥೆಗಳು. ಮೂರು ದಶಕಕ್ಕೂ ಹಿಂದೆಯೇ ರಚಿತವಾದ ಈ ಪ್ರಸಂಗ ನೂರಾರು ಭಿನ್ನ ಬಗೆಯ ಪ್ರಯೋಗಕ್ಕೆ ಒಡ್ಡಿಕೊಂಡ ಕಥೆ.ತಾಳಮದ್ದಲೆ, ಬಯಲಾಟ, ಗಾನವೈಭವ, ಎಲ್ಲ ಬಗೆಯ ಪ್ರಯೋಗವಾಗಿವೆ. ಇಡೀ ಕಥೆ ಪ್ರಯೋಗವಾಗದಿದ್ದರೂ ಬಿಡಿಬಿಡಿಯಾಗಿ ಯಶಸ್ವಿಯಾದ ಕೃತಿ. ಈ ಪ್ರಸಂಗದ ಕೊನೆಯ ಭಾಗವು ಮಂಗಳೂರು ವಿ.ವಿ.ಯ ಪದವಿ ತರಗತಿಗೆ ಪಠ್ಯವೂ ಆಗಿದೆ. ತಾಳಮದ್ದಲೆ ಪ್ರಯೋಗದಲ್ಲಿ ತುಂಬಾ ಯಶಸ್ವಿಯಾದ ಪ್ರಸಂಗ. ಯಗಾಂತರ ಕಥೆಯ ಒಳಗೂ, ಕಾಲಪಲ್ಲಟದ ಸಮಸ್ಯೆ ಕಥಾವಸ್ತುವಾಗಿಯೂ ಇಲ್ಲಿ ಪ್ರತಿಪಾದಿತವಾಗಿವೆ. ಎಷ್ಟು ದೊಡ್ಡವರೂ ಕಾಲದ ಮುಂದೆ ಶೂನ್ಯ, ಅವತಾರಿಗೂ ತಪ್ಪಿದ್ದಲ್ಲ ಈ ಅವಘಡ ಎಂಬ ನೀತಿ ಇಲ್ಲಿದೆ. ಯಯಾತಿ, ಶ್ರೀಕೃಷ್ಣ, ಜರ, ಧರ್ಮರಾಜ, ಅರ್ಜುನ, ದೇವಯಾನಿ, ಶರ್ಮಿಷ್ಠೆ, ಸಾತ್ಯಕಿ, ಉದ್ಧವ, ಕಲಿ, ವಜ್ರ ಮುಂತಾದ ತುಂಬು ಅನುಭವದ ಪಾತ್ರಗಳು ಈ ವಸ್ತುವಿನಲ್ಲಿ ಇರುವುದರಿಂದ ಅಧ್ಯಯನಶೀಲ ಕಲಾವಿದರಿಗೆ ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೂ ಆಟ ಕೂಟಗಳಲ್ಲಿ ಅನುವಾಗುತ್ತದೆ. ಕಾಲ, ವೇಗ ವೈವಿಧ್ಯಕ್ಕೆ ವಸ್ತುವಿನಲ್ಲಿ ಕಲ್ಪನೆಗೆ ಅವಕಾಶ ಕಡಿಮೆ ಇರುವುದು ಕೊರತೆ ಅನ್ನಿಸಿದರೂ ಪಾತ್ರಗಳ ಘನತೆಯಿಂದ ಅದನ್ನು ಸರಿದೂಗಿಸಬಹುದು. ಕಾವ್ಯಮಯ ಕಥನ ಕೌಶಲ ಹೃದ್ಯವಾಗಿ ಒದಗುವುದೇ ಈ ಕೃತಿಯ ಹಿರಿಮೆ. ಯಕ್ಷಲೋಕದ ಹೆಸರಾಂತ ಕೃತಿಗಳ ಸಾಲಿನಲ್ಲಿ ನಿಂತ ಕೃತಿ ಮಹಾಪ್ರಸ್ಥಾನ.

# ಪ್ರಸಂಗ ಸಾಹಿತ್ಯ

**ಭಾಮಿನಿ**
ಶಿರವೆರಗಿ ಗಜವದನನಂಘ್ರಿಗೆ |
ಸರಸಮತಿ ಸರಸತಿಯ ಪಾಡುತ |
ಶಿರವನೊಲೆವೆನು ವೇಣುನಾದನ ಮನದಿ ಚಿತ್ರಿಸುತ ||
ಗುರುಹಿಯರಿಂಗೆರಗುತೀ ಕಲೆ |
ಯರಿತು ಮೆಚ್ಚುವ ಹೃದಯವಂತಗೆ |
ಕರವ ಮುಗಿವೆನು ಬಾಗುವೆನು ಸತ್ಕವಿಪರಂಪರೆಗೆ || 1 ||

***ಸಂಧಿ 1 : ರಾಜಾ ಯಯಾತಿ***

**ಸೌರಾಷ್ಟ್ರ - ತ್ರಿವುಡೆ**
ನಾಗಯಾಗದೊಳಾದ ದುರಿತವ |
ನೀಗಲೋಸುಗ ಮುನಿಪನಂಘ್ರಿಗೆ |
ನಾಗನಗರಾಧೀಶ ಶಿರವನು | ಬಾಗಿ ಕೇಳ್ದ || 1 ||
ಎಂತು ಯದುಪೂರುಗಳು ತಮ್ಮಯ |
ಸಂತತಿಗೆ ರಾಜ್ಯವನು ಪಡೆದರು |
ಪಿಂತೆ ಜನಿಸಿದ ಯದುಗೆ ಪಟ್ಟವು | ನಿಂತುದಿಲ್ಲ || 2 ||
ವೀರಯಾದವರೇಕೆ ಮಡಿದರು |
ಶ್ರೀರಮಣ ಪಾಂಡವರ ಮರಣದ |
ವಾರತೆಯ ಪೇಳೆನಲು ನುಡಿದನು | ದಾರಮತಿಯು || 3 || 4 ||

**ಭೈರವಿ - ಝಂಪೆ**
ರಾಜಕುಲಸಂಭೂತ | ರಾಜ ರಾಜ ಯಯಾತಿ |
ರಾಜಿಸಿಹನೋಲಗದೊಳಾವಂತಿ ಪುರದಿ ||
ಆಜಿಯೊಳಗೆದುರಿಲ್ಲ | ನಹುಷನೃಪಸಂಭವಗೆ |
ರಾಜರ್ಷಿಗಿತ್ತ ಶುಕ್ರಾಚಾರ್ಯ ಸುತೆಯ || 1 ||
ಮತ್ತೆ ಯದುತುರ್ವಸರು | ಪುತ್ರರಾದರು ಶುಕ್ರ |
ಪುತ್ರಿಯಲಿ ಬಾಲಕರ ನೋಡಿ ಲೀಲೆಗಳ ||
ಪೃಥ್ವಿಪತಿ ಮುದವೆತ್ತ | ನುತ್ತರೋತ್ತರವಾಯ್ತಿ |
ನುತ್ತ ಚಂದ್ರಾನ್ವಯಕೆ | ಕುಲದೀಪರೆನುತ || 2 || 6 ||

**ವಾರ್ಧಕ**
ಅಸುರಪತಿ ವೃಷಪರ್ವನಾತ್ಮಭವೆ ಶರ್ಮಿಷ್ಠೆ |
ವಸುಧೇಶನರಸಿ ಶುಕ್ರಾತ್ಮಜೆಗೆ ಸಖಿಯಾಗಿ |
ಬೆಸೆಯಲಾರದ ಬದುಕ ಪಡೆದಳಾ ದೇವಯಾನಿಯ ನೂಕಿ ಕೂಪದೊಳಗೆ ||
ಕುಸುಮಶರತಾಪದಿಂದಿಹಳವಳು ಬೇರೊಂದು |
ವಸತಿಯಂ ನಿರ್ಮಿಸಿಹನುದ್ಯಾನದೊಳು ಭೂಪ |
ವ್ಯಸನದಿಂದಿಹಳಲ್ಲಿ ನಿರ್ಭಾಗ್ಯೆ ಪತಿಹೀನೆ ತಾನೆಂದು ಮರುಗಿ ಬಾಲೆ || 1 || 7 ||

**ಮಧುಮಾಧವಿ - ತ್ರಿವುಡೆ**
ಪ್ರಾಯದುಂಬಿದೆ ರಾಯಗುಪವರಿಯು |
ಪಾಯವಿಲ್ಲದ ಸೌಧದಂದದೊ |
ಳಾ ಯಯಾತಿಯ ಪಡೆವ ಬಯಕೆಯು |
ನಾಯ ಸ್ವರ್ಗದ ಸ್ವಪ್ನವು || 1 ||
ಎಂದು ಚಿಂತಿಪ ಸತಿಯ ಗೃಹದೆಡೆ |
ಗೊಂದು ದಿನ ಭೂಪಾಲ ತನ್ನನು |
ಹೊಂದಿ ಬರುತಿಹ ಭಟರನುಳಿದೈ |
ತಂದನೀಕ್ಷಿಸಿ ವನಸಿರಿ || 2 || 9 ||

**ಸಾರಂಗ - ಅಷ್ಟ**
ಉದ್ಯಾನಸೌಂದರ್ಯ ಸವಿದು | ಬಪ್ಪ |
ಮುದ್ದು ಮಗನ ಕಂಡು ನಲಿದು ||
ತದ್ಧಿಮಿ ತಕಧಿಮಿ ಕುಣಿದಿಹುದೆನ್ನೆದೆ |
ಭದ್ರನನಪ್ಪುತ | ಮುದ್ದಿಸಿ ನಲಿಯಲು || 1 ||

ಎರಗಿ ಕುಳ್ಳಿರಿಸಿ ಸತ್ಕರಿಸಿ | ಇತ್ತ |
ಬರವೇನು ಸುಖವೆ ನಿನ್ನರಸಿ ||
ತರಳರ ಮುದ್ದಿಸಿ ಸುಖವನುಣ್ಣುವ ಮನ |
ವಿರುವುದು ಕರೆದು ತಾ | ಮರಳಿ ನೀ ಬರುವಾಗ || 2 ||
ಕುಶಲವೆ ಶರ್ಮಿಷ್ಠೆ ನಿನಗೆ | ಕಾಲ |
ವಶಗೈದ ಕುತ್ಸಿತಕೃತಿಗೆ ||
ವ್ಯಸನವಾಗಿದೆ ಮೋದ | ಮುದ್ರಿತ ಮುಖದ ಹಿಂ |
ದೆಸೆದಿಹ ದುಃಖವ | ದೇನುಸಿರೆನ್ನೊಳು || 3 || 12 ||

**ಸೌರಾಷ್ಟ್ರ - ತ್ರಿವುಡೆ**
ದಾಸಿಗಾತ್ಮವೆಯಿಲ್ಲದಿರೆ ಸುಖ |
ದಾಸೆಯೆಂತೈ ಕಮಲಿನಿಗೆ ಸಖ |
ನೇಸರುದಿಸದೆ ಪಲ್ಲವತ್ವ | ಕ್ಕಾಸೆಯುಂಟೆ || 1 ||
ಕುಂದು ಬಂತೇನೆನ್ನ ರಾಜ್ಯದಿ |
ಬಂಧುಗಳ ಬಿಟ್ಟುಳಿದ ದುಃಖವೆ |
ನಿಂದಿಪಳೆ ಶುಕ್ರಜೆಯದಕೆ ನೀ | ನೊಂದಿಯೇನೆ || 2 || 14 ||

**ಮೆಚ್ಚುಗೌಳ - ಅಷ್ಟ**
ಸ್ವಾಮಿ ದೈಹಿಕವಾಗಿ | ಕ್ಷೇಮಿ ನಾ ಋತುಸ್ನಾತೆ |
ಭೂಮೀಶ ಕೊಡುಗೈ ದೊರೆ ||
ಕಾಮಿಸಿದರಿಗಿಷ್ಟಾರ್ಥವನೀವ ಚಕ್ರೇಶ |
ಕಾಮಬಾಧೆಯ ಹರಿಸೊ | ನೀ ವರಿಸೊ || 1 || 15 ||

**ಸಾಂಗತ್ಯ - ರೂಪಕ**
ತರುಣಿ ನಾ ನಿನ್ನನು ವರಿಸಲಸಾಧ್ಯವು |
ಗುರುಶುಕ್ರ ವಚನವಂತಿಹುದು ||
ಅರಸಿಗೆ ಸರಿ ನೀನು ಕಾಮಸಂಬಂಧವು |
ಹೊರತು ಮೀರಲು ಸಾಧ್ಯವಲ್ಲ || 1 || 16 ||

**ಕೇದಾರಗೌಳ - ಅಷ್ಟ**
ಒಪ್ಪಿದೆ ಶುಕ್ರಾಚಾರ್ಯರ ಮಾತ ನಡೆಸು ನೀ |
ತಪ್ಪು ಬೇಡಾ ಮಾತಿಗೆ ||
ಒಪ್ಪುವ ಮಾತೊಂದ ನಡೆಸಿಕೊಡೈ ನಿನ್ನಿಂ |
ದಪ್ಪುದೀ ಕಾರ್ಯ ಭೂಪ || 1 || 17 ||

**ಸಾಂಗತ್ಯ - ರೂಪಕ**
ಏನು ನಿನ್ನಿಷ್ಟಾರ್ಥವೀಯುವೆನದು ಮತ್ತೀ |
ಕ್ಷೋಣಿಯೊಳಿಲ್ಲದಿರ್ದಡೆಯು ||
ತ್ರಾಣದಿಂ ತಂದೀವೆ ಪ್ರಾಣದೊತ್ತೆಯನಿಟ್ಟು |
ಜಾಣೆ ಪೇಳದನೆನ್ನೊಳಿಂದು || 1 || 18 ||

**ಭಾಮಿನಿ**
ದೇವಯಾನಿಗೆ ಪುತ್ರರುತ್ಸವ |
ಭೂವರನೆ ಎನಗಿಲ್ಲವದನಾ |
ಭಾವಶುದ್ಧದಿ ಬೇಡುವೆನು ಕೊಡು ಸಾವೆನಲ್ಲದಿರೆ ||
ಕೋವಿದೆಯ ನುಡಿಗರಸ ನಕ್ಕನು |
ಕಾವವನು ಕೊಲಗೊಡುವನೇ ತವ |
ಭಾವವರಿತೆನು ಕೇಳ್ವುದೆನ್ನಯ ಮನದ ಸಂಗತಿಯ || 1 || 19 ||

**ಸುರುಟಿ - ಏಕ**
ಉಶನರ ಕೋಪವನು | ಸಹಿಸಲಿ |
ಕಸದಳವದಕಾನು ||
ಉಸುರಿದೆ ನಿನ್ನನು ಕಂಡಾರಭ್ಯದಿ |
ವಶನಾಗಿಹೆ ತಡೆದಿದೆ ವಿಧಿ ಭಿತ್ತಿಯು || 1 ||

ಹಸಿವಿಗೆ ಔಷಧವು | ಭೋಜನ |
ಉಶನರು ಬಲ್ಲವರು |
ವಶರಾದರು ಮೋಹದ ಮಗಳೆನ್ನುತ |
ಕುಸುಮಾಸ್ತ್ರನ ಹತಿ ಸಹಿಸೆನು ಬಾ ಬಾ || 2 ||
ಬಂದುದು ಬರಲೆನುತ | ನಹುಷಜ |
ಸುಂದರಿ ಏಳೆನುತ ||
ಒಂದಾಗುತಲಾನಂದಸಮುದ್ರದಿ |
ಕುಂದದೆ ಕದಲದೆ ಕಳೆದರು ದಿನಗಳ || 3 || 22 ||

**ಕಂದ**
ಪೊಡವಿಪ ಶರ್ಮಿಷ್ಠೆಯೊಳಮ್ |
ಪಡೆದನು ಅನು, ದೃಹ್ಯು, ಪೂರು ನಾಮದ ಸುತರಂ ||
ನಡೆರೂಪುಗುಣ ಸಿತಪಕ್ಷ |
ದುಡುಪನ ಮೀರಿಸಲು ಗುರುಕುಲಕ್ಕಂ ಕಳುಹಲ್ || 1 || 23 ||

**ಸೌರಾಷ್ಟ್ರ - ತ್ರಿವುಡೆ**
ಅರಿತಳೆಲ್ಲವ ದೇವಯಾನಿಯು |
ಕರೆಸಿದಳು ಶರ್ಮಿಷ್ಠೆಯನು ನಿಜ |
ವರುಹು ಯಾರಿಂದುದಿಸಿದವರೀ | ತರಳರೆಂದು || 1 ||
ಋಷಿಯ ದಯದಿಂದುದಿಸಿದವರೀ |
ಪಸುಳೆಗಳು ನಿನಗೇಕೆ ಕೋಪವು |
ಉಶನಕುವರಿಯೆ ಕ್ಷಮಿಸು ನಿನಗಾ | ನುಸುರದುದಕೆ || 2 ||
ನಿಜವಿದೆನ್ನುತ ಭೂಪ ಪಾದಾಂ |
ಬುಜದೊಳಾಣೆಯನಿಟ್ಟರೊಪ್ಪುವೆ |
ಕುಜನೆ ಧೂರ್ತಳೆ ಬಲ್ಲೆನಾರವ | ಸುಜನಕಪಟಿ || 3 ||
ಋಷಿಸದೃಶನೆಂದಿಹನು ತವಪತಿ |
ವಸುಮತೀಶ್ವರನವನ ಪೊಂದುತ |
ಪಸುಳೆಗಳನಾ ಪಡೆದೆನಲ್ಲವು | ದೆಸೆಗೆಡುಕರು || 4 || 27 ||

**ಕೇದಾರಗೌಳ - ಝಂಪೆ**
ಕೆರಳುತ್ತ ದೇವಯಾನಿ | ಸೆರಗಬಿಗಿ |
ದರರೆ ತೋರಿಕೆಯ ಮಾನಿ ||
ಅರಿಯದಂತಿವಳ ಬೆರೆತೆ | ನೃಪನೆ ಬೇ |
ಗರುಹೆನ್ನೊಳೇನು ಕೊರತೆ || 1 ||
ಎನ್ನ ಪಿತಗೊರೆವೆನೆನುತ | ಸಿಡುಕಿನಿಂ |
ತನ್ನವನ ಜರೆಯುತಳುತ ||
ಅನ್ನವಿಟ್ಟುದಕೀಕೆಯು | ಮದವೇರಿ |
ಎನ್ನ ಪತಿಯನೆ ಬೆರೆತಳು || 2 ||
ಜರೆದು ಪೊರಡಲಿಕಾ ಸತಿ | ಬರುತ ಕಂ |
ಡರಿತನೆಲ್ಲವ ಭೂಪತಿ ||
ಒರೆವೆ ನಿನಗೆಲ್ಲ ಕಾಂತೆ | ಶುಕ್ರರೆಡೆ |
ಗರುಹಲೊಯ್ಯುವೆಯ ಭ್ರಾಂತೆ || 3 ||
ಭ್ರಾಂತುಬುದ್ಧಿಯ ಬಿಡಿಸುವೆ | ಸುಮ್ಮನಿರು |
ಕಾಂತ ಮೋಸವು ಸಹ್ಯವೆ ||
ಎಂತೆಂದರಾನೊಲ್ಲೆನು | ಎನುತ ಹಟ |
ವಂತೆ ಪಿತನೆಡೆ ಪೊರಟಳು || 4 ||
ನಹುಷಜನು ತಾಳೆನ್ನುತ | ಸತಿಯೆ ಹಿತ |
ವಹ ಕಾರ್ಯವೆಸಗೆನ್ನುತ ||
ಸಹಧರ್ಮಿಣಿಯ ಹಿಂದಕೆ | ದೈನ್ಯದಿಂ |
ಬಹ ಬೆದರಿ ಶುಕ್ರತ್ವಕೆ || 5 || 32 ||

**ಭಾಮಿನಿ**
ಋತ್ವಿಜೋತ್ತಮ ದೈತ್ಯಕುಲಗುರು |
ಮತ್ರ್ಯಪತಿಜಾಮಾತ ದಿವಿಜಾ |
ವರ್ತ ನಡುಗುವುದಿಣುಕಿ ನೋಡರು ಶುಕ್ರನಿಹ ನೆಲವ ||
ಸತ್ತ್ವಯುತ ಸನ್ಮಂತ್ರಸಿದ್ಧನು |
ಪೊತ್ತವನು ಕವಿಬಿರುದ ಉಶನನು |
ನಿತ್ಯಕರ್ಮವ ಮುಗಿಸುತೇಳಲು ಬಂದರಾಯೆಡೆಗೆ || 1 || 33 ||

**ತೋಡಿ - ಅಷ್ಟ**
ಮಗಳಳಿಯರ ಕಂಡನು | ಸತ್ಕಾರದಿಂ |
ಭೃಗುಜ ತೋಷದೊಳೆಂದನು ||
ಸೊಗಸಾಯ್ತು ನೀವಿಬ್ಬ | ರುಗಳಿಲ್ಲಿಗೈತಂದ |
ಬಗೆಯರಿಯೆನು ನಿಮ್ಮ | ಮೊಗದೊಳಿಲ್ಲವು ಸೊಗ || 1 ||
ಪರಮಪೂಜ್ಯರೆ ಲಾಲಿಸಿ | ಎನ್ನಲು ತಡೆ |
ದರಸ ಸಾಕಿದ ನಿಲ್ಲಿಸಿ ||
ಒರೆವೆನಪ್ಪನೆ ಕೇಳು | ಮರುಕ ನಾ ತಾಳೆನು |
ದುರುಳೆ ಶರ್ಮಿಷ್ಠೆ ನೀ | ನೊರೆದ ಹಾಗಿಲ್ಲವು  || 2 ||
ಬಳಿದಾದುದೆಲ್ಲ ಹಾಲೆ | ಅಪ್ಪಯ್ಯ ನಾ |
ತಿಳಿದೆನೀ ಪರಿಯಿಂದಲೆ ||
ಇಳೆಯರಸನು ನಿಮ್ಮ | ನೆಲೆಗೆ ತಾರದೆ ದುರು |
ಳಳ ಸೇರಿ ಮೂರು ತ | ರಳರನು ಪಡೆದನು || 3 || 36 ||

**ಮಾರವಿ - ಏಕ**
ಕಾಮಸಂಬಂಧಕೆ ನಿರ್ಬಂಧವ ನಾ |
ನೀ ಮೊದಲಿತ್ತಿಹೆನು ||
ಭೂಮಿಪ ಯೌವನಮದದೊಳು ಮರೆತಿಹ |
ಕಾಮುಕನಹೆ ನೀನು || 1 ||
ತರುಣಿಯ ಬೆರೆಯದ ವೃದ್ಧಾಪ್ಯವ ನೀ |
ಧರಿಸುವುದೆಂದೆಂದು ||
ಅರಿಯೆಲೊ ಶುಕ್ರನ ಮೀರ್ದರೆ ಶಿಕ್ಷೆಯ |
ಪರಿ ಸವಿ ಹೇಗೆಂದು || 2 || 38 ||

**ಸಾಂಗತ್ಯ - ರೂಪಕ**
ಶಾಪವನಿತ್ತಿರೆ ಕೋಪದ ಭರದಿ ವೃ |
ದ್ಧಾಪ್ಯ ಬರುವ ತೆರದಿಂದ ||
ಪಾಪವೆಂತೈ ಋತುಸ್ನಾತೆ ಕೇಳ್ದುದನಿತ್ತೆ |
ಭೂಪಾಲತ್ವದಲಿ ನಾನಿರುತ || 1 ||
ಚಿಣ್ಣರೆಂತಾಳ್ವರು ರಾಜ್ಯವ ಕೇಳ್ದಿರೆ |
ಎನ್ನೊಳು ನಿಜವ ನೀವ್ ಪಿಂದೆ ||
ಕನ್ಯೆ ಬ್ರಾಹ್ಮಣಿಳೆನೆ ಒಪ್ಪಿಸಿರ್ದಿರಿ ವೃದ್ಧ |
ನನ್ನು ಸೇವಿಸೆ ಕಳುಹುವುದು || 2 || 40 ||

**ಭಾಮಿನಿ**
ಚಿಂತಿಸಿದ ಶುಕ್ರಾರ್ಯ, ದುಡುಕಿದ |
ಕಿಂತು ಫಲ ಕೈಸೇರ್ದುದೇ ಸುತೆ |
ಯಂತರಂಗಕೆ ನೋವು ಪತಿ ವೃದ್ಧತ್ವಕೇಂಗೆಯ್ವ ||
ಚಿಂತಿಸದಿರೈ ಪೋಗು ತವ ಮತಿ |
ವಂತ ಪುತ್ರರೊಳಾರು ವಾರ್ಧಕ |
ವಾಂತು ಕೊಳುವರವರ್ಗೆ ಕೊಡು ನೀ ಪಡೆಯೊ ಯೌವನವ || 1 ||
ವೃದ್ಧನಾದ ಕುಮಾರ ಪಟ್ಟವ |
ಹೊದ್ದುವುದಕಧಿಕಾರಿಯಪ್ಪ ಪ್ರ |
ಸಿದ್ಧನಾಗುವ ಸಾಗರಾಂತದ ಪೊಡವಿಯೊಡೆತನದಿ ||
ತಿದ್ದು ನೀತಿಯೊಳೆನಲು ನಮಿಸುತ |
ಲೆದ್ದು ಪೊರಡಲು ಕಾಲು ನಡುಗಿತು |
ವೃದ್ಧತನದಲಿ ನೃಪನ ಬಿಳಿಗೂದಲಿನ ತಲೆನಡುಗೆ || 2 || 42 ||

**ಪಂತುವರಾಳಿ - ಮಟ್ಟೆ**
ನಾರಿ ಬಾರೆ ದಾರಿ ತೋರೆ | ತೋರದೀಯೆಡೆ |
ಜಾರಿ ಬೀಳ್ವೆ ಪಿಡಿಯದಿರೆ ವಿ | ಚಾರಿಸುತ ನಡೆ ||
ಭೋರನೇಕೆ ನಡೆವೆ ಸ್ವಲ್ಪ | ಸೈರಿಸುವೆ ತಡೆ |
ದೂರದಾರಿ ನಡೆವುದೆಂತು | ಬಾರದೆಲೆ ಕಡೆ  || 1 ||
ಎಡವಿ ಬೀಳುತೇಳುತರಸ | ಮಡದಿ ಮಾರ್ಗವ |
ನಡೆಸಿ ಬರಲು ನಡುಗಿ ಕಾಲು | ತಡವರಿಸುತವ ||
ಅಡವಿ ನದಿನದಂಗಳನ್ನು | ನಡೆದು ಬಂದನು |
ಕೆಡಿಸಿತವನ ಮಡದಿ ಮೋಹ | ಬಿಡಲಿಕರಿಯನು || 2 || 44 ||

**ವಾರ್ಧಕ**

ಅರಮನೆಗೆ ಬಂದರಸ ದುಃಖದಿಂದಿರಲಿತ್ತ |
ಗುರುಕುಲದಿ ಕಲಿತೈವರರಸುಗುವರರು ಪೆತ್ತ |
ವರ ಕಾಂಬ ತವಕದಿಂ ಬರೆ ವೃದ್ಧಸೇವೆಯಂ ಗೈದು ತಾಯಂದಿರಿರಲು ||
ಪರಿಯನೆಲ್ಲವನರಿತರೊಂದು ದಿನ ಯದುವ ಭೂ |
ವರನು ಕೇಳ್ದನು ಶುಕ್ರಶಾಪವೀ ವೃದ್ಧಾಪ್ಯ |
ತರಳ ನೀನಿದ ಪಡೆದು ಕೆಲಕಾಲ ಯೌವನವ ಕರುಣಿಸೆನಗೆನಲೆಂದನು || 1 || 45 ||

**ಬೇಗಡೆ - ಅಷ್ಟ**

ಶಾಪಲೇಪವು ಬೇಡ ಬೇಡೆನಗೆ | ಸತಿ ಮೋಹದಿಂ ವೃ |
ದ್ಧಾಪ್ಯ ಸಂಬಂಧಿಸಿದುದೈ ನಿನಗೆ ||
ಭೂಪತಿತ್ವದಿ ಮೆರೆಯಲಸದಳ |
ರೂಪ ಯೌವನವಿಲ್ಲದೀ ಪರಿ |
ತಾಪವನು ನಾ ಧರಿಸಲಾರೆನು |
ಕೋಪಿಸದಿರೆಂದರಗಿದನು ಯದು || 1 || 46 ||

**ಸಾಂಗತ್ಯ - ರೂಪಕ**

ಎನ್ನ ವೃದ್ಧಾಪ್ಯವ ಧರಿಸಲಸಾಧ್ಯ ಮೇಣ್ |
ನಿನ್ನಾಸೆ ಭೂಪತ್ವಕಾಗಿ ||
ನಿನ್ನ ವಂಶಜರಿಂಗು, ನಿನಗು ಸಿಂಹಾಸನ |
ವಿನ್ನಿಲ್ಲ ನಡೆಯೆಂದನವಗೆ || 1 || 47 ||

**ಮಧುಮಾಧವಿ - ತ್ರಿವುಡೆ**

ತರಹರಿಸಿ ಯದು ಮರುಗಿ ಪಿತನಡಿ |
ಗೆರಗಿ ಕ್ಷಮಿಸೈ ತಾತ ತಪ್ಪಿದೆ |
ಧರಣಿ ರಮಣರ ಕ್ಷಾತ್ರತೇಜಕೆ |
ಪರರ ಸೇವೆಯ ಶಿಕ್ಷೆಯೆ || 1 ||
ನಾನು ದೋಷಿಯು ವಂಶದವನತಿ |
ಗೇನು ಪ್ರಾಯಶ್ಚಿತ್ತವಿಲ್ಲವೆ |
ಜ್ಞಾನಿ ತಪಸಿಯು ನೀನೆ ಗತಿಯೀ |
ಹಾನಿಯೆಂತೈ ಪೋಪುದು || 2 ||
ಪುತ್ರ ನಿನ್ನಯ ವಂಶ ಮುಂದೆ ಪ |
ವಿತ್ರಮಪ್ಪುದು ಹರಿಯು ಜನಿಸಲು |
ಸತ್ತ್ವಶಾಲಿಗಳವರ ಗರ್ವವೆ |
ಮೃತ್ಯುವಪ್ಪುದು ಮುಂದಕೆ || 3 ||
ಕಂದ, ಕೃಷ್ಣೋತ್ತರದಿ ಪಟ್ಟವು |
ನಿಂದಪುದು ನಿನ್ನನ್ವಯಕೆ ನಡೆ |
ಕುಂದದೀ ರಾಜ್ಯಗಳ ಗಡಿಯೊಳು |
ನಿಂದಿರೈ ರಕ್ಷಣೆಯಲಿ || 4 || 51 ||

**ವಾರ್ಧಕ**

ಅನುವ ದೃಹ್ಯುವ ತುರ್ವಸುವ ಕೇಳಲೊಪ್ಪದಿರೆ |
ತನಯರಿಗೆ ಪಟ್ಟವಿಲ್ಲೆಂದವರ ಜರೆದು ಭೂ |
ಪನು ಪೂರುವಂ ಕರೆದು ಕೇಳ್ದಡವನೆರಗುತೆಂದನು ತಾತ ನಿಮಗಿಲ್ಲದ ||
ತನುವೇಕೆ ನಿಮ್ಮಿಷ್ಟವಿದ್ದಷ್ಟು ಕಾಲ ಯೌ |
ವನವನನುಭವಿಸಿರೆನೆ ಮೆಚ್ಚಿ ನೃಪನನುಭವಿಸಿ |
ತನಯಗದ ಮರಳಿಸುತ ಪಟ್ಟಮಂ ಕಟ್ಟಿ ನೀತಿಯನರುಹಿ ತಪಸಿಗೈದ || 1 ||
ಯದುವಿನಿಂ ಯಾದವರು ಪದಿನೆಂಟು ಪಂಗಡವು |
ಅದರೊಳಗೆ ವೃಷ್ಣಿ ಭೋಜಾಂಧಕರು ಕುಂತಿಗಳು |
ಕದನಗಲಿಗಳು ಸುಪ್ರಸಿದ್ಧರಾ ಹಲಕೃಷ್ಣರುದಿಸಿದರು ವಸುದೇವಗೆ ||
ಉದಧಿ ಪರಿಮಿತವಾ ವಸುಧೆಯ ಪೌರವರಾಳಿ |
ಪದುಳತನದಿಂ ಮೆರೆಯೆ ಭಾರತಾನ್ವಯವದರೊ |
ಳುದಿಸೆ ಪಾಂಡವ ಕೌರವರ್ ಭಾರತಾಹವ ಯುಧಿಷ್ಠಿರಗೆ ಜಯವಿತ್ತುದು || 2 || 53 ||

*ಸಂಧಿ 2 : ಶ್ರೀಕೃಷ್ಣಾಶ್ವಮೇಧ*

**ಕಾಂಬೋಧಿ - ಝಂಪೆ**
ದ್ವಾರಕಾನಗರಿಯಲಿ | ಶ್ರೀರಮಣ ಯೋಚಿಸಿದ |
ಭಾರತಾಹವದಿ ಭೂ | ಭಾರವಿಳುಹಲಿಕೆ ||
ಕಾರಣರು ಪಾಂಡವರು | ದಾರವಂ ಪಿಡಿದು ನಾ |
ಹಾರಿಸಿದೆ ರಥವ ಬಹು | ಶೂರರುರುಳಿದರು || 1 ||
ಕ್ರೂರೆ ಪೂತನಿಯಿಂ ವಿ | ಧೂರಕನವರೆಗೆ ಸಂ |
ಹಾರವಾಯ್ತೆನ್ನಾವ | ತಾರದುದ್ದೇಶ ||
ಪೂರಯಿಸಿದುದು ಕ್ಷೀರ | ವಾರಿಧಿಯ ಸಾರಲಾಂ |
ದ್ವಾರಾವತಿಯು ಮುಳುಗಿ | ನೀರ ಸೇರುವುದು || 2 || 55 ||

**ಮಧ್ಯಮಾವತಿ - ಆದಿ**
ಕಲಿ ಪದವಿಡಲಿಕೆ ಬಿಡರು ಯಾದವರು |
ಇಳೆಯೊಳಗೆದುರಿಲ್ಲದಿಹ ವೀರಭಟರು ||
ಬಲಗರ್ವಿಗಳ ನಾನೇ ರಕ್ಷಿಸಿಕೊಳುತ |
ಉಳಿಸಿಪೋದರೆ ಮುಂದೆ ಕಷ್ಟವೆಂದರಿತ || 1 ||
ಎಲೆಯ ಮರೆಯ ಕಾಯಿಯಂತೆ ನಾನಿದ್ದು |
ಕೊಲುವೆನಿವರನೆಂದು ಮುರಹರನೆದ್ದು ||
ಬಲಯುತ ಯಾದವರೊಡನೊಂದು ದಿವಸ |
ಹಲನೊತ್ತಿನೊಳಗಿರೆ ಪೇಳಿದ ಮನಸ || 2 || 57 ||

**ನವರೋಜು - ಏಕ**
ಯಾದವರೆಲ್ಲರು ಕೇಳಿ | ಹಯ |
ಮೇಧವ ಮಾಡುವೆನೇಳಿ ||
ಮೇದಿನಿಯೊಳಗಿಹ | ಭೂಧರರೆಲ್ಲರ |
ಸಾಧಿಸಿ ಗೆಲಲೀ | ಗೈದಿ ತುರಗ ಸಹ || 1 ||
ವಂದಿಸುತಾ ಯಾದವರು | ಗೋ |
ವಿಂದನೆ ಕೇಳ್ ಭೂಭುಜರು ||
ಬಂದರೆ ಯುದ್ಧಕೆ | ಸಂಧಿಸುತಲಿ ಕರ |
ತಂದಪೆವಪ್ಪಣೆ | ತಂದೆಯೆ ಕೊಡು ನೀ || 2 || 59 ||

**ಬೇಗಡೆ - ಅಷ್ಟ**
ಸೇನೆಯೊಡೆತನವಿತ್ತು ಸಾತ್ಯಕಿಯ | ಕಳುಹಿಸುತ ಪೇಳಿದ |
ಭೂ ನರೇಂದ್ರರ ಗೆಲುವ ಸಂಗತಿಯ ||
ಹಾನಿಗೊಳಿಸದಿರೆರಗಿ ಬೇಡ್ವರ |
ಪ್ರಾಣದಾನವನಿತ್ತು ಪೊರೆಯಿರಿ |
ಮಾನನಿಧಿಗಳ ಸಖ್ಯವೆಸಗುತ |
ಕ್ಷೋಣಿಯನು ನೀವ್ ಜಯಿಸಿ ಬನ್ನಿರಿ || 1 || 60 ||

**ಭಾಮಿನಿ**
ಸತ್ಯಕನ ಸುತ ನಮಿಸಲಪ್ಪಣೆ |
ಯಿತ್ತು ಕಳುಹಿದ ಹರಿಯು ಶೃಂಗರಿ |
ಸುತ್ತ ತೇಜಿಯ ಬಿಟ್ಟರಾ ಯದುವರರ ಬಳಸಿನಲಿ ||
ಸಾತ್ಯಕಿಯು ಬೆಂಬತ್ತಿ ತುರಗವ |
ಮುತ್ತಿದನು ಬಹುದೇಶದರಸರ |
ನೊತ್ತಿ ಸಿದ್ಧಾಯವನು ಕೊಂಡನು ಹರಿಯ ಹಯಮುಖಕೆ || 1 || 61 ||

**ಕೇದಾರಗೌಳ - ಅಷ್ಟ**
ನಡೆದುದು ಹರಿಯಶ್ವಮೇಧದ ಕುದುರೆಯು |
ಪಿಡಿದುತ್ತರಾಪಥವ ||
ಧಡಿಗ ತ್ರಿಗರ್ತರ ಸೂರ್ಯವರ್ಮನೊಳ್ ಕಪ್ಪ |
ಪಡೆದರಾ ಯದುವೀರರು || 1 ||
ನರಕನ ಮೊಮ್ಮನಾಳುವ ಪ್ರಾಗ್ಜ್ಯೋತಿಷವೆಂಬ |
ಪುರದತ್ತ ನಡೆತರಲು ||
ದುರುಳನ ದೂತರು ಪಿಡಿದಶ್ವವನು ತಮ್ಮ |
ದೊರೆಯೆಡೆಗೈತಂದರು || 2 || 63 ||

**ಸೌರಾಷ್ಟ್ರ - ತ್ರಿವುಡೆ**
ದೈತ್ಯಪತಿ ಪ್ರಾಗ್ಜ್ಯೋತಿಷೇಶ್ವರ |
ನಿತ್ಯ ಸಭೆಯನು ಮಂತ್ರಿ ಪುರಜನ |
ವೃತ್ತದಿಂದಾ ವಜ್ರದತ್ತನು | ಸತ್ತ್ವಶಾಲಿ || 1 ||
ಓಡುತೋಡುತ ಬರುವ ಚರರನು |
ನೋಡಿದನು ನಮಿಸಿದರನೆತ್ತಿದ |
ಆಡಿ ನೀವೇಕಿಲ್ಲಿ ಬಂದಿರಿ | ಬೇಡ ಭಯವು || 2 || 65 ||

**ಮುಖಾರಿ - ಏಕ**
ಒಡೆಯ ನೀ ಲಾಲಿಸಬೇಕು ನುಡಿಯ | ವಜ್ರದತ್ತ ಮಹರಾಯ |
ನುಡಿಯಲಾರೆವು ದೊಡ್ಡ ಸೋಜಿಗ ಜೀಯ ||
ಪಡೆಯೊಂದೆಮ್ಮರಿಯ | ಗಡಿಯನು ಪೊಕ್ಕುದು |
ನಡುಗಿಸಿತಿದು ಬಲು | ದಡಿಗದಾನವರನು ||
ಬೆಡಗಿನ ಕುದುರೆ ಮುಂ |
ಗಡೆ ಬರೆ ಪಿಡಿದೆವು || ಒಡೆಯ || 1 ||
ದ್ವಾರಕಾವತಿಯಿಂದ ಬಂತು | ಸಾತ್ಯಕಿಯೆಂಬ |
ಶೂರನಿದರ ರಕ್ಷೆಯಾಂತು ||
ಸಾರಿದನೀಯೆಡೆ | ಭಾರಿ ಸೇನೆಯ ಮುಂದೆ |
ಧೀರನಡೆಯ ತೇಜಿ | ಕಾರುದೇಹನ ಕೆಟ್ಟ |
ಪೋರರು ಸಹ ಯದು |
ವೀರರೈತಂದರು || ಒಡೆಯ || 2 || 67 ||

**ಸೌರಾಷ್ಟ್ರ - ತ್ರಿವುಡೆ**
ಅರರೆ ಕೃಷ್ಣನ ಕುದುರೆ ಈಯೆಡೆ |
ಹರಿದುದೋ ಯಾದವರ ಮೃತ್ಯುವ |
ಕರೆದುದೋ ಎನ್ನರಿಯ ಶಿರವ | ನ್ನರಿದುದಹಹ || 1 ||
ಉಬ್ಬಿದನು ಸಾತ್ಯಕಿಯ ಮಾರಿಗೆ |
ಹಬ್ಬವೆಸಗಲು ಬರುವ ಕೃಷ್ಣನ |
ಕೊಬ್ಬನಿಳಿಸುವೆ ಮೆರೆವೆ ತಾನೆಂ | ದಬ್ಬರಿಸಿದ || 2 ||
ಮಂತ್ರಿ ಬಾರೊ ಕರಾಳಲೋಚನ |
ಕಂತುಪಿತನಧ್ವರದ ಕುದುರೆಯ |
ಪಿಂತೆ ಬಂದರ ಗೆಲಬರಲಿ ಮಮ | ದಂತಿ ಈಗ || 3 || 70 ||

**ಮಾರವಿ - ಏಕ**
ಏರುತ ಗಜವನು ಕೂಡುತ ಸೇನೆಯ |
ವೀರ ವಜ್ರದತ್ತ ||
ಸಾರಿದ ಮಂತ್ರಿ ಮಹಾರಥರೊಂದಿಗೆ |
ಮಾರಾಂತರು ಭಟರು || 1 ||
ಕಾಣುತ ಸಾಂಬನು ಸಾಣೆಯಲಗುಗಳ |
ಪೋಣಿಸಿ ಧನುವಿಂಗೆ ||
ಸೇನೆಯ ತರಿಯುತ | ಚೋಣಿ ಸಹಿತ ಬರೆ |
ದಾನವರೋಡುತಿರೆ || 2 || 72 ||

**ಘಂಟಾರವ - ಅಷ್ಟ**
ಕಂಡನಾಗ ಕರಾಳಲೋಚನ ಬಾಣ ||
ಗೊಂಡು ಕಿಡಿಕಿಡಿಗೊಂಡು ಸಾಂಬನ |
ಕಂಡು ನೀನಾರೆಂದನು || 1 ||
ಸಾಂಬನೆಂಬರು ಕೃಷ್ಣಕುಮಾರನು ||
ಕುಂಭಿನಿಪರೆಂದೆಂಬರಿಂ ಕರ |
ತುಂಬಿಸಿದೆ ನೀನಾರೆಲಾ || 2 ||
ಕೇಳೊ ಸಾಂಬ ಕರಾಳಲೋಚನ ಮಂತ್ರಿ ||
ಶೂಲಿ ಬಂದರು ಬಿಡೆವು ತುರಗವ |
ಪೇಳಿ ಕರೆತಾರಪ್ಪನ || 3 || 75 ||

**ಭಾಮಿನಿ**
ಬಿಡಿ ಹಯವ ಸಾಮದಲಿ ಕೃಷ್ಣನ |
ಗೊಡವೆ ನಿಮಗೇಕಿತ್ತು ಕಪ್ಪವ |
ಪೊಡಮಡಲು ರಕ್ಷಿಪೆವು ಯಮಪುರಕಿಡದಿರೀಗಡಿಯ ||
ನಡೆ ನಡೆಯೊ ದ್ವಾರಕಿಗೆ ಹಯವನು |
ಬಿಡುವನೇ ನಮ್ಮೊಡೆಯ ಕೃಷ್ಣನ |
ಕಡಿದು ಯದುಮೇಧವನು ರಚಿಸುವ ನಡೆಯದಾಟಗಳು || 1 || 76 ||

**ಸೌರಾಷ್ಟ್ರ - ತ್ರಿವುಡೆ**
ಕಿಡಿಗೆದರುತಾ ಸಾಂಬ ಬಾಣವ |
ಬಿಡಲು ಹೊಯ್ದಾಡಿದರು ಸರಿಸಮ |
ಕಡಿದ ಧನುಶರ ಮೂರ್ಛೆಗೊಂಡನು | ದಡಿಗ ದೈತ್ಯ || 1 || 77 ||

**ಪಂತುವರಾಳಿ - ಮಟ್ಟೆ**
ಕರಿಯನೇರಿ ವಜ್ರದತ್ತ |
ಶಿರವನೊಲೆದು ಸುರಿದು ಬಾಣ |
ಬರಲು ತಡೆದು ನಿಲ್ಲಿಸುತ್ತ | ಲೊರೆದ ಸಾತ್ಯಕಿ || 1 ||
ನಿಲ್ಲು ನಿಲ್ಲು ರಾಕ್ಷಸೇಂದ್ರ |
ಎಲ್ಲಿ ನಮ್ಮ ತುರಗ ಬಿಡುವು |
ದೊಳ್ಳಿತೀಗಲಲ್ಲದಿರಲು | ಕೊಲ್ಲುವೆನು ದಿಟ || 2 ||
ಕೊಲ್ಲಬಲ್ಲ ಶೂರನಾರು |
ಎಲ್ಲಿ ಮೆರೆದೆ ಪೌರುಷಗಳ |
ಜೊಳ್ಳು ಮಾತು ಸತ್ವಹೀನ | ನಿಲ್ಲದೈದೆಲಾ || 3 || 80 ||

**ಕೇದಾರಗೌಳ - ಅಷ್ಟ**
ಮಾತುಳಾಂತಕಯಜ್ಞದಶ್ವರಕ್ಷೆಯನಾಂತು |
ಭೂತಳೇಶರ ಗೆದ್ದವ ||
ವಾರ್ತೆಯನರಿಯೆಯ ಭಾರತಾಹವಮಲ್ಲ |
ಸತ್ಯಕಸುತ ಸಾತ್ಯಕಿ || 1 ||
ಆರರಿಯರು ನಿನ್ನ ಭೂರಿಶ್ರವನು ತಲೆ |
ಹಾರಿಪ ಸಮಯದಲಿ ||
ವೀರ ಪಾರ್ಥನು ರಕ್ಷಿಸಿದನೀಗ ಬದುಕಿಸ |
ಲಾರಿಲ್ಲ ನಡೆ ಪುರಿಗೆ || 2 ||
ಒಂದೇ ದಿನದಿ ಬಹು ಸಾಸಿರ ಯೋಧರ |
ಕೊಂದಂಥ ಸಾಹಸಿಯು ||
ಹೊಂದಿಸುವೆನು ನಿನ್ನ ತಾತನ ಪೆಸರೂರ |
ತಂದರೊಳಿತು ಕಪ್ಪವ || 3 || 83 ||

**ಭೈರವಿ - ಏಕ**
ಕರೆಸಿಕೊ ಕೃಷ್ಣನ ಧುರಕೆ | ಯದು |
ವರರೆನ್ನಯ ಸಾಹಸಕೆ ||
ಸರಿಬರುವರೆ ಪರಿಕಿಪೆನು | ತಾ |
ಳರೆನಿಮಿಷದ ಯುದ್ಧವನು || 1 || 84 ||

**ತುಜಾವಂತು - ಮಟ್ಟೆ**
ನಿನ್ನ ಯುದ್ಧಕೇಕೆ ಕೃಷ್ಣನು | ಸುರರ ಸಿರಿಯ |
ಮುನ್ನ ತರಿದ ನರಕದೈತ್ಯನು ||
ನಿನ್ನ ತಾತನವನ ತರಿದನು | ಸೆರೆಯೊಳಿರುವ |
ಕನ್ನೆಯರನು ಬಿಡಿಸಿಕೊಂಡನು ||
ನಿನ್ನ ಪಿತನು ಪಾರ್ಥನೆಸುಗೆ |
ಯನ್ನು ತಾಳದೈಷ್ಣವಾಸ್ತ್ರ |
ಉನ್ನತಿಕೆಯೊಳಿಡಲು ಶಮಿಸಿ |
ಚೆನ್ನಕೃಷ್ಣ ಧರಿಸಿ ಮೆರೆದನು || ಪಾರ್ಥನಸ್ತ್ರ |
ವನ್ನು ತಾಳದವನ ತರಳನು || 1 ||

ತಾತಪಿತರ ವಧೆಯ ಘಾತಕಿ | ಅವನ ಕೊಲದೆ |
ಜಾತತನವದೆಂತೊ ಸಾತ್ಯಕಿ ||
ಈ ತುರಂಗಮಖಿದ ಮುಖಿದಿ |
ಧಾತುಗೆಡಿಸೆ ನಿಮ್ಮನೆಲ್ಲ |
ಆತುಕೊಳಲು ಬರುವ ಕೃಷ್ಣ |
ಘಾತಗೊಳಿಸಿ ಖ್ಯಾತನಾಗುವೆ || ಔತಣವನು |
ಭೂತಗಣಕೆ ಬಡಿಸಿ ಮೆರೆಯುವೆ || 2 || 86 ||

**ಸೌರಾಷ್ಟ್ರ - ತ್ರಿವುಡೆ**
ಧರಣಿಪತಿ ಬಲಸಂಧ ಶೌರ್ಯದಿ |
ಮೆರೆಯೆ ಭಾರತ ಯುದ್ಧದಲಿ ನಾ |
ಶಿರವನಿಳುಹಿದ ತೆರನ ತಿಳಿಯೆಂ | ದೊರೆಯುತೆಚ್ಚ || 1 ||
ಬಿಡೆ ಹಯವ ನಡೆ ಸತ್ಯಕಜ ಹುಲು |
ಪೊಡವಿಪಾಲರ ಗೆಲಿದ ಸಾಹಸ |
ನಡೆಯದೀ ನೆಲಕೆಂದು ತೂರಿದ | ಕಡಿದು ಶರವ || 2 || 88 ||

**ಭಾಮಿನಿ**
ಸೆಣಸಿದರು ನಾಲ್ದಿವಸವೀರ್ವರು |
ದನುಜಪತಿಯುಬ್ಬಟೆಯು ಕುಸಿದುದು |
ಧನುವನಿಕ್ಕಡಿಗೈದು ಸಾತ್ಯಕಿ ಕೆಣಕಿದನು ಖಳನ ||
ಕಿನಿಸಿನಿಂ ಗದೆ ಖಡ್ಗ ತೋಮರ |
ದನುವರದಿ ಕೈಸೋಲೆ ಯುಯುಧಾ |
ನನು ಸೆರೆಯ ಪಿಡಿಯುತ್ತಲಿಂತೆಂದನು ತಲೆಯನೊಲೆದು || 1 || 89 ||

**ಮಧ್ಯಮಾವತಿ - ಆದಿ**
ದಾನವ ಬಿಡು ಬಿಡು | ಬಾಣವ |
ಹುಲು ಮಾನವ ಯದುಗಳು |
ತ್ರಾಣವುಳ್ಳವರೇನೊ || ದಾನವ || ಪಲ್ಲ ||
ನರಕದೈತ್ಯನ ಮೊಮ್ಮ ಭಗದತ್ತ ತರಳ |
ಧುರಸಮರ್ಥರ ಗಂಡ ತೊಡು ಬಿಡು ಸರಳ ||
ಕರೆಸಿ ಕೊಲ್ಲುವೆಯೇನು ಕೃಷ್ಣನ ಪೇಳಾ |
ಮರಿಯಾದೆಯುಳಿವಡೆ ಸೇವಿಸು ಗರಳ || 1 ||
ಕಟ್ಟಿಕೊಂಡೊಯ್ದರಿಲ್ಲವು ಕೇಳ್ವ ಸಹಸಿ |
ಕೆಟ್ಟೆ ನೀ ಕೃಷ್ಣನ ವೈರವ ಬೆಳಸಿ ||
ಅಟ್ಟಹಾಸಗಳನ್ನು ಬಿಟ್ಟೆಯ ಪೇಳು |
ನೆಟ್ಟ ದೃಷ್ಟಿಯ ಭೂಮಿಗಿಟ್ಟುದೇಕೇಳು || 2 || 91 ||

**ನೀಲಾಂಬರಿ - ರೂಪಕ**
ವೀರ ನಿನ್ನ ಪೌರುಷಕ್ಕೆ |
ಮಾರುಹೋದೆನಯ್ಯ ಕ್ಷಮಿಸು ||
ಹೋರುವುದು ಪರಾಕ್ರಮಕ್ಕೆ |
ಪಾರಮಾರ್ಥವಲ್ಲವೇನೈ || 1 ||
ತುರಗ ಬಿಡುವೆ ತೆರುವೆ ಕರವ |
ತರಳತನವಗೈದು ಹರಿಯ ||
ಜರೆದ ಪಾಪಿಯೆನ್ನ ನೀನು |
ತರಿಯೊ ಯದುಕುಲಾವತಂಸ || 2 || 93 ||

**ಕಂದ**
ಕ್ಷಮಿಸುತ ಕರಮಂ ಪಡೆಯುತ |
ಸಮುಚಿತವಚನದೊಳು ಮನ್ನಿಸಿ ಹರಿಯ ಯಜ್ಞಕೆ ||
ಕ್ರಮಿಸಿರಿ ನೀವೀಗೆನ್ನುತ |
ಗಮಿಸಿದ ಸಾತ್ಯಕಿಯು ವಾಜಿಯಂ ಬಳಿವಿಡಿದುಂ || 1 || 94 ||

**ಸಾಂಗತ್ಯ - ರೂಪಕ**
ಮೇಘಸಂಧಿ ನೃಪಾಲ ಮಗಧೇಶನಾಳುವ |
ನಾ ಗಿರಿವ್ರಜ ಮಧ್ಯದೇಶ ||
ಯಾಗದ ಕುದುರೆ ಬಂತೀ ದೇಶದುದ್ಯಾನ |
ಕಾಗಿ ಕಂಡರು ದೂತರಿದನು || 1 || 95 ||

**ಆರ್ಯಸವಾಯಿ - ಏಕ**
ಘಡ ಘಡ ನಮ್ಮುದ್ಯಾನದಿ |
ಹೊಡಿ ಹೊಡಿ ನಡೆದೈತರುತಿದೆ ಕು....ಕು.... ಕುದುರೆ ||
ನಡೆ ಬಲು ಗಡಸಿದೆ ತ....ತ ತಡಿ ಹಿಂಗಡೆ |
ಪಡೆ ಬಂದಿತು ನೋಡೆನಲೋರ್ವ || 1 ||
ಹಣೆಯೊಳಗೇನೋ ಪಿಳಿ ಪಿಳಿ ಹೊಳೆದಿದೆ |
ಮಣಿಸಿಂಗಾರವು ಮೆಯ್ ತುಂಬ ||
ಕುಣಿಯುವ ಕುದುರೆಯೊ | ಗೆಣೆಯನೆ ನೋಡಾ |
ಗಣೆಯಾಟಿಗರೆನೆ ಮತ್ತೋರ್ವ || 2 ||
ಅಲ್ಲಲ್ಲಿದೆ ಬಿಲ್ಬಾಣವು ಕೈಯ್ಯೊಳು |
ಮುಳ್ಳುಗಳೇನೋ ಭುಜದೊಳಗೆ |
ಕಳ್ಳರೊ ಸುಳ್ಳರೊ ಏನ್ನುಡುಗಾಡೋ |
ಮೆಲ್ಲನೆ ಕಾಲ್ಕೀಳುವ ಏಳೊ || 3 ||
ಒಡೆಯರ ತಾವಾ | ನಡೆಯುವ ನಾವು |
ನುಡಿಯುವ ಬೆದರದೆ ನಡೆದುದನು ||
ಪಿಡಿದೊಯ್ಯುವ ಸಾಕ್ಷಿಗೆ ಕುದುರೆಯ ನಿಂ |
ತಡೆ ಬಡಿಯುವರಿವರೋಡೋಡು || 4 ||
ಅಟ್ಟುವರೋಡು ಕಟ್ಟುವರೋಡು |
ಪೆಟ್ಟನು ಕೊಟ್ಟರೆ ಸಾಯುವೆವು ||
ಜುಟ್ಟು ಸಿಕ್ಕಿದರೆ ಹೆಂಡಿರು ಮಕ್ಕಳ |
ಹೊಟ್ಟೆಯ ಹಿಟ್ಟಿಗೆ ಕಲ್ಲಹುದು || 5 || 100 ||

**ಕೇದಾರಗೌಳ - ಅಷ್ಟ**
ಸಭೆಯೊಳು ಮಂಡಿಸಿ ಸಹದೇವತನಯನು |
ಉಭಯಪಾರ್ಶ್ವದೊಳೊಪ್ಪುವ ||
ಅಭಿಮಾನಿ ಮಂತ್ರಿ ಪ್ರಜಾಪ್ರಮುಖರಿಗೆಲ್ಲ |
ಅಭಯವೀಯುತಲಿರ್ದನು || 1 ||
ಕುದುರೆಸಹಿತ ಬಂದು ಪದಕೆ ದೂತರು ಮಣಿ |
ದುದ ಕಂಡೆಲ್ಲಿಯದಶ್ವವು ||
ಬೆದರಿದಿರೇಕೆ ನೀವಿದನೆಲ್ಲಿ ಪಿಡಿದಿರೆಂ |
ದುದ ಕೇಳು ತೋರ್ವನೆಂದ || 2 ||102 ||

**ಸಾರಂಗ - ಅಷ್ಟ**
ಉದ್ಯಾನದೊಳಗಿದು ಇತ್ತು | ರಾಜ |
ಹದ್ದು ಬದ್ದಿಲ್ಲದೆ ನಡೆದು ಬಂದಿತ್ತು |
ಗದ್ದಲ ಗುಂಪು ಹಿಂದಿತ್ತು | ಇದರ |
ಸುದ್ದಿಯು ನಮಗಿಷ್ಟೆ ಗೊತ್ತು || 1 ||
ಮತ್ತೋರ್ವ ಪೇಳ್ದ ಕೇಳೊಡೆಯ | ನಮ |
ಗಿತ್ಯರ್ಥವಾಗದು ಜೀಯ ||
ಇತ್ತೇನೊ ಹಣೆಯೊಳು ರಾಯ | ಮಣಿ |
ಸುತ್ತಿನ ಹಣೆಬರವಾವುದು ತಿಳಿಯ || 2 || 104 ||

**ಭಾಮಿನಿ**
ಹರಿಯ ಹಯಮುಖದಶ್ವವಿದ ಭೂ |
ವರರು ಪೌರುಷದಿಂದ ಕಟ್ಟುತ |
ಧುರವೆಸಗಿ ರಣಮಲ್ಲ ದಳಪತಿ ಸತ್ಯಕಜನೊಡನೆ ||
ಕರವನಿತ್ತೆರಗುವುದು ಸೋತರು |
ಹಿರಿತನವನೊಪ್ಪುವುದು ಬಪ್ಪುದು |
ತುರಗಮಂ ಬಳಿವಿಡಿದೆನುವ ಲೇಖನವ ವಾಚಿಸಿದ || 1 || 105 ||

**ಸೌರಾಷ್ಟ್ರ - ತ್ರಿವುಡೆ**
ಹರುಷವೀ ಹರಿಯಶ್ವಮೇಧವು |
ಧುರವು ಧರಣಿಪತನಕೆ ಶೋಭೆಯು |
ಪರಿಕಿಸುವೆ ಸಾತ್ಯಕಿಯ ಪೌರುಷ | ದಿರವನೆನುತ || 1 ||
ಭರಿಸಿದನು ಚತುರಂಗಸೇನೆಯ |
ಪುರದ ರಕ್ಷಣೆ ಬಲಿದು ಕಟ್ಟಿದ |
ತುರಗವನು ಪೊರವಂಟ ಸೇನಾ | ನೆರವಿಯೊಡನೆ || 2 || 107 ||

**ಶಂಕರಾಭರಣ - ಮಟ್ಟೆ**
ಮೇಘಸಂಧಿ ತೂಗಿ ಧನುವ | ನಾಗ ಶರಗಳ |
ತಾಗಿಸಲ್ಕೆ ವೈರಿಸೇನೆ | ಗಾಗಲುಬ್ಬಸ ||
ವೇಗದಿಂದ ತನ್ನ ರಥವ | ನೆದುರು ಸಾಗಿಸಿ |
ಯಾಗದಶ್ವ ಬಿಡುಬಿಡೆನುತ | ತಡೆದ ಸಾತ್ಯಕಿ || 1 ||108 ||

**ಮಾರವಿ - ಏಕ**
ಮಗಧ ಜರಾಸಂಧಾಖ್ಯನ ಪೌತ್ರನೆ |
ತಗುವುದೆ ಧುರ ನಿನಗೆ ||
ಹಗೆತನ ಸಲ್ಲದು ಯಾದವರಾವೈ |
ಜಗದೊಳಗೆದುರಿಲ್ಲ || 1 ||
ಯಾದವರಿಗೆ ಪೌರುಷ ಮಾರಿರುವುದೆ |
ಮೇದಿನಿಯೊಡೆತನವ ||
ಸಾಧಿಸಿದವರಾವ್ ವಸುವಂಶೋದ್ಭವ |
ರಾದೆವೆ ಗೋವಳರು || 2 ||
ಬಲ್ಲೆ ಜರಾಸಂಧಕನನು ಪವನಜ |
ಚೆಲ್ಲಬಡಿದ ಪರಿಯ ||
ಖುಲ್ಲನವನ ವಂಶಜ ನಿನಗೆನ್ನನು |
ಗೆಲ್ಲುವ ಕನಸಾಯ್ತೆ || 3 || 111 ||

**ಕೇದಾರಗೌಳ - ಅಷ್ಟ**
ಮಧ್ಯದೇಶದ ಚಕ್ರವರ್ತಿ ಜರಾಸಂಧ |
ಅದ್ವಿತೀಯನ ಗೆಲ್ಲಲು ||
ಸಾಧ್ಯವಿಲ್ಲದಕಾಗಿ ಭೀಮನಿಂ ಮೋಸದಿ |
ಗೆದ್ದ ನಿನ್ನಯ ಕೃಷ್ಣನು || 1 || 112 ||

**ವಾರ್ಧಕ**
ಸಾಕೆಲವೊ ಕೃಷ್ಣನ ವಿಭಾಡಿಸಲ್ ನಿನ್ನವರ |
ನೇಕ ಯತ್ನಗಳಿಂ ಪ್ರಯತ್ನಿಸುತ ಸೋತವರು |
ಶೋಕಮಂ ತಾರದಿರು ನಿನ್ನ ಸತಿಯರಿಗರಸ ಶ್ರೀಕೃಷ್ಣನಧ್ವರವಿದು ||
ಶ್ರೀಕೃಷ್ಣ ಗೋಪಾಲ ಬಲ್ಲೆ ಭಜನೆಯ ಬಿಡು ಪಿ |
ನಾಕಿ ಬಂದರು ಬಿಡೆನು ಕ್ಷಾತ್ರಧರ್ಮಗಳಂತೆ |
ನೀ ಕುಶಲನೇ ಯುದ್ಧವಿದ್ಯೆಯೊಳು ತೋರೆಂದು
ಸೋಕಿದಂ ಸರಳ ಮಳೆಯ || 1 || 113 ||

**ಕಂದ**
ಹಳಚಲು ಸಮಬಲರೀರ್ವರು |
ಕಳೆದುದು ದಿನ ಮೂರು ಸಾತ್ಯಕಿಯ ಬಲದೆಸೆಕಂ ||
ಅಳವಿಯ ಮೆಚ್ಚುತ ನುಡಿದಂ |
ಕೊಳುಗುಳ ನಿಲ್ಲಿಸುತ ಮೇಘಸಂಧಿ ನೃಪಾಲಂ || 1 || 114 ||

**ಬೇಗಡೆ - ಅಷ್ಟ**
ಯಾದವಾಗ್ರಣಿ ಮೆಚ್ಚಿದೆನು ನಿನಗೆ | ಶಸ್ತ್ರಾಸ್ತ್ರ ವಿದ್ಯದಿ |
ಮೇದಿನಿಯೊಳೆಣೆಗಾಣೆ ಸಾಧನೆಗೆ ||
ಭೂಧರರ ನೀನತುಳ ಬಲದಿಂ |
ಕಾದಿ ಗೆಲಿದವ ಕ್ಷಾತ್ರತನ ಹಯ |
ಮೇಧದಶ್ವವ ಕಟ್ಟಿ ಕಾದಿದೆ |
ಮೋದವಾಯಿತು ಕೃಷ್ಣನೆಮ್ಮವ || 1 ||
ಕೊಡುವೆ ನಾ ನಿನಗೀಗ ಕಪ್ಪವನು | ಶ್ರೀಕೃಷ್ಣನಧ್ವರ |
ವಡಿಗಡಿಗೆ ಕಾಮ್ಯಾರ್ಥಸಾಧನವು ||
ಪಡೆಸಹಿತ ಬಾರೆನ್ನ ನಗರಿಗೆ |
ನಡೆಯೊ ಮುಂದಕೆ ಕೆಲದಿನದಿ ನಾ |
ನಡೆಸುವೆನು ಸತ್ಕಾರವನು ನೀ |
ಪಿಡಿದು ಬಾರೀ ಸ್ನೇಹಹಸ್ತವ || 2 ||

ರಾಯ ನಿನ್ನೀ ಸ್ನೇಹಮಯ ನುಡಿಗೆ | ಒಪ್ಪಿದೆನು ಬಹೆ ಸಿ |
ದ್ದಾಯವಿತ್ತುದೆ ಸಾಕು ಪ್ರಿಯವೆನಗೆ ||
ಶ್ರೀಯರಸನವಧಿಯು ಸಮೀಪಿಸಿ |
ಪಾಯವಿಲ್ಲವು ನಿಲ್ಲಲಾರೆನು |
ತೋಯಜಾಂಬಕನಧ್ವರಕೆ ನೀ |
ಬಾಯೆನುತ ಬೀಳ್ಕೊಂಡು ನಡೆದನು || 3 || 117 ||

**ಭಾಮಿನಿ**
ಹರಿಯ ಪದಕ್ಕೈತಂದು ನಮಿಸಿದ |
ಹರುಷದಿಂದೀ ಹರಿಯು ಧರಣೀ |
ಶ್ವರರ ನಗರಿಯ ಪೊಕ್ಕು ಮರಳಿತು ಕರವ ಕೈಗೊಂಡು |
ಹಿರಿಯ ಬುದ್ಧಿಯೊಳೆನುತ ಕೊಟ್ಟರು |
ಪರಮಪುರಷನೆನುತ್ತಲಿತ್ತರು |
ಧುರಕೆ ನಿಂದರು ಸೋತು ತೆತ್ತರು ಕರುಣಿ ತವ ದಯದಿ || 1 || 118 ||

**ವಾರ್ಧಕ**
ಮನ್ನಿಸಿದನೆಲ್ಲರಂ ಕರೆಸಿದಂ ಋತ್ವಿಜರ |
ಸನ್ನದ್ಧನಾಗಿ ಯಮುನಾತೀರಕೈತಂದ |
ನುನ್ನತದ ಯಜ್ಞವೇದಿಕೆಯ ಶಾಸ್ತ್ರೋಕ್ತದಿಂ ಸ್ಥಪತಿಗಳ್ನಿರ್ಮಿಸಿದರು ||
ಬಣ್ಣ ಬಂಗಾರದಿಂ ಕಂಗೊಳಿಸುತಿರೆ ರಾಜ |
ಮನ್ನೆಯರು ಕಪ್ಪವಿತ್ತೆರಗಿದರು ಬಾಂಧವರ |
ಬನ್ನಿರೆಂದುಪಚರಿಸಿ ಪಾಂಡವರ ತಕ್ಕೈಸಿ ನಡೆಸಿದಂ ಹಯಮೇಧವ || 1 || 119 ||

***ಸಂಧಿ 3 : ಶ್ರೀಕೃಷ್ಣನಿರ್ಯಾಣ***

**ಮಧ್ಯಮಾವತಿ - ತ್ರಿವುಡೆ**
ಯಾಗ ಮುಗಿದುದು ಸಾಂಗವಾಗಿಯೆ |
ಆಗಮಜ್ಞ ಭವಿಷ್ಯ ಕೋವಿದ |
ರಾಗಿರುವ ಗಾಲವಪ್ರಮುಖರಂ |
ದಾಗಮಿಸಿದರು ಬಿಡದಿಗೆ || 1 ||
ಆ ದಿವಸ ಕೃಷ್ಣನ ಕುಮಾರರು |
ಯಾದವರೊಳಿವರತಿಮದೋದ್ಧತ |
ರಾದವರು ಗರ್ವಾಂಧರರಿಯರು |
ಸಾಧಕರ ಸತ್ತ್ವಂಗಳ || 2 ||
ಋಷಿಗಳೆಲ್ಲರು ಬೆಳೆಸಿ ಗಡ್ಡವ |
ಹಸಿವ ಹಿಂಗಿಪುಪಾಯವಿದ ಪರಿ |
ಕಿಸಲು ಬೇಕೆಂದವರು ನೆನೆಯುತ |
ಹೊಸ ಪರೀಕ್ಷೆಯ ತಮ್ಮೊಳು || 3 || 122 ||

**ಜಂಜೂಟಿ - ಅಷ್ಟ**
ಸಾಂಬಗೆ ತೊಡಿಸೆ ಸ್ತ್ರೀವೇಷ | ಭ್ರಮೆ |
ಕಾಂಬರ್ಗಾಯಿತು ಕಣ್ಗೆ ಮೋಸ ||
ತುಂಬು ಗರ್ಭಿಣಿ ಎಂಬ | ನಂಬುಗೆ ಬರುವಂತೆ ||
ಅಂಬರವನುದರದೊಳು ತುಂಬಿಸಿ |
ಬೊಂಬೆಯನು ಮಗು | ಸಂಭ್ರಮಿಸುವೋಲ್ || 1 ||
ಮೀಸೆಯನಳಿಸಿ ಕುಂಕುಮದ | ಬೊಟ್ಟ |
ಆಸ್ಯದೊಳಿಟ್ಟು ಬೈತಲೆಯ ||
ಕೇಶಶೃಂಗಾರದಿ | ಹೆರಳನು ಇಳಿಬಿಟ್ಟು |
ಸಾಸಿರಬ್ಧದ ತಪಸಿಗಳವೋ |
ಲೀ ಸಹೋದರರೈದಿ ತೃಪ್ತಿಯ || 2 || 124 ||

**ಕೇದಾರಗೌಳ - ಝಂಪೆ**
ತಪಸಿಗಳ ಬಳಿ ಬಂದರು | ಹೊಯ್ಲಿನಲಿ |
ಕಪಟಮಂ ನೆನೆದೆಲ್ಲರು ||
ಕಪಿಚೇಷ್ಟೆಗೈದಣಕಿಸಿ | ಉದ್ಧಟರು |
ಉಪಟಳವನೀಯಲೆಳಸಿ || 1 ||

ಸಾಷ್ಟಾಂಗವಂದನೆಗಳು | ನೀವ್ ಮಂತ್ರ |
ದೃಷ್ಟಾರರೆಂದಾಗಲು ||
ಜ್ಯೇಷ್ಠತ್ವ ಬ್ರಾಹ್ಮಣರಿಗೆ | ಪೇಳಿರೆ |
ಮಿಥ್ಯಾರ್ಥದೇಳ್ಗೆ ಹೇಗೆ || 2 || 126 ||

**ಸಾಂಗತ್ಯ - ರೂಪಕ**
ಯದುಕುಮಾರರೆ ನೀವು ಬಂದೆರಗಿದಿರೇಕೆ |
ಸುದತಿಯೋರ್ವಳು ಸಹಿತಿಲ್ಲಿ |
ಪದುಮನಾಭನೆ ನಿಮ್ಮ ಸಲಹುತ್ತಲಿರುವಾಗ |
ಉದಿಸಲಾರದು ಕಷ್ಟವೈಸೆ || 1 ||
ಕಷ್ಟವೀಗೆಮಗೆಲ್ಲಿ ನೋಡಿರೀ ತರಳೆಯ |
ನ್ನಿಷ್ಟೂ ತಿಳಿದಾಯ್ತು ನಿಮಗೆ ||
ಸ್ಪಷ್ಟವಗೊಳಿಸೆ ನಾಚಿಕೆ ಬಿಡದಿವಳಿಗೊಂ |
ದಿಷ್ಟಾರ್ಥ ತಿಳಯುವ ಬಯಕೆ || 2 ||
ಬಯಕೆ ಏನದ ಪೇಳಿ ನಾಚಿಕೆಯಿರ್ದಡೆ |
ಬಯಸಿ ನಿಮ್ಮೊಡನಿಲ್ಲಿ ಬಹಳೆ |
ನಿಯಮ ನೀತಿಯ ಮೀರೆ ಭಯ ಕಡೆಗಪ್ಪುದು |
ನಯವಿನಯವು ಶೋಭೆ ನಿಮಗೆ || 3 || 129 ||

**ಕಾಂಬೋಧಿ - ಝಂಪೆ**
ನೀವು ಋಷಿವರರೈಸೆ | ಭಾವಶುದ್ಧರು ಜಗದಿ |
ಭಾವಜನ ಗೆಲಿದವರು | ಕೋವಿದರು ಪೇಳಿ ||
ಈ ವನಿತೆಯಾಪನ್ನ ಸತ್ವೆ ಜನಿಸುವ ಶಿಶುವು |
ಆವುದಪ್ಪುದು ಗಂಡೊ, ಹೆಣ್ಣೊ || 1 || 130 ||

**ಕೇದಾರಗೌಳ - ಝಂಪೆ**
ಈ ಕಪಟಗರ್ಭ ಬಯಕೆ | ಯಾದವಾ |
ನೀಕಮಂ ತರಿವ ಒನಕೆ ||
ಕಾಕುತನಕಿದು ಪ್ರತಿಫಲ | ನಡೆಯಿರೈ |
ಜೋಕೆ ಚೇಷ್ಟೆಯ ಗೈವಿರ || 1 ||
ಎಂದು ಶಪಿಸುತ ಮುನಿಗಳು | ಯೋಚಿಸುತ |
ಇಂದಿರೇಶನ ಮನದೊಳು ||
ಬಂದಿಚ್ಛೆ ನುಡಿಸಿತೆನುತ | ತೆರಳಿದರು |
ಮಂದಿರಾಶ್ರಮಗಳತ್ತ || 2 || 132 ||

**ವಾರ್ಧಕ**
ಮುನಿಶಾಪ ಕೃಷ್ಣಪಕ್ಷವು ಯದುಕುಲಕ್ಕಾಯ್ತು |
ಒನಕೆ ಗರ್ಭಸ್ರಾವ ರಾಹು ಸಾಂಬಗೆ ಬಡಿಯೆ |
ಮನಕರಗಿ ದುಃಖಾಶ್ರು ಹರಿದು ಕಳವಳಿಸುತ್ತ ಬೆದರಿ ಬೇಗುದಿಗೊಂಡರು ||
ಮನದುಪಾಯದಪಾಯಸೌಧ ಬುಡಗಳಚುತಿರೆ |
ಜನಿಸೆ ಮುಸಲವು ಬಂದು ಯಮುನೆಯೆಡೆಗಾಗ ಯೌ |
ವನರು ತೇತೇಯ್ದುದಂ ಕದಡಿದರು ಕೊನೆಗುಳಿದ
ಲೋಹಮಂ ನದಿಗೆಸೆದರು || 1 || 133 ||

**ಕಂದ**
ನಿಟ್ಟುಸಿರಿಡುತವರೆಲ್ಲರು |
ಕಷ್ಟದಿ ತಿರುಗಿದರು ಯಾದವ ಕುವರರಲ್ಲಿಂ ||
ದಿಟ್ಟಿಸಿ ತಿನಿಸಿನ ಭ್ರಮೆಯೊಳು |
ಥಟ್ಟನೆ ಮೀನೊಂದು ನುಂಗೆ ಲೋಹದ ತುಂಡಂ || 1 || 134 ||

**ಆರ್ಯಸವಾಯಿ - ಏಕ**
ಜರನೆಂಬೋರುವ ಬೇಡನು ಬೇಟೆಗೆ |
ತೆರಳಿರಲೇನೂ ಸಿಗದಿರಲು ||
ಕರಪಿಡಿದರಸಿಯ ಕರೆಯುತ ಬಂದನು |
ಉರಿದಿರೆ ಹೊಟ್ಟೆಯು ಹಸಿವೆಯೊಳು || 1 || 135 ||

**ಶಂಕರಾಭರಣ - ಮಟ್ಟೆ**
ಜಾಣೆಯೆತ್ತ ಪೋದಿ ಬಾರೆ |
ಕಾಣೆನಲ್ಲೆ ಬೇಟೆ ನಲ್ಲೆ ||
ರಾಣಿ ಹಸಿವೆ ತಿರುಗಿ ಬಳಲಿ |
ಏನನಾದರಿಕ್ಕಿ ತಣಿಸೆ || 1 ||
ಅಡಿಗೆ ಎಂತು ಪೇಳೊ ಜಾಣ |
ಗಡಿಗೆ ಬರಿದು ನಿನ್ನ ಕಾಯ್ದು ||
ಬೆಡಗನಾಡುತಿರುವಿಯೇನು |
ಕೊಡು ಕೊಡೀಗ ಪಿಡಿದ ಬೇಟೆ || 2 ||
ಅಪ್ಪನಾಣೆ ಕೇಳೆ ಚದುರೆ |
ತಪ್ಪಿ ನಡೆವೆನೇನೆ ಬಾಲೆ ||
ಒಪ್ಪೊತ್ತೂಟಕಿಲ್ಲವೇನೆ |
ಇಪ್ಪಷ್ಟಾದರೊಪ್ಪಿಗೈನಗೆ || 3 || 138 ||

**ಸುರುಟಿ - ಏಕ**
ಚಿಣ್ಣರ ಹಸಿವೆಯನು | ತಣಿಸದೆ |
ಕಣ್ಣೀರಿಡುತಿಹೆನು ||
ಉಣ್ಣಲಿಕ್ಕುವುದು | ಇನ್ನೆಂತೋಪನೆ |
ಹೆಣ್ಣಾದೆನಗಾ | ಪುಣ್ಯವ ಕರುಣಿಸು || 1 ||
ಏತಕಳುವೆ ನಿಲಿಸು | ಈ ಕ್ಷಣ |
ನಾ ತರುವೆನು ತಿನಿಸು ||
ಆತುಕೊಳ್ಳುತ್ತ ಕಿ | ರಾತನು ಗಾಳವ |
ನೈತಂದನು ಯಮು | ನಾತಟಕಾಕ್ಷಣ || 2 || 140 ||

**ಸಾರಂಗ - ಅಷ್ಟ**
ಬೀಸುತೆಸೆದ ಬೇಡ ಗಾಳ | ಹೊಂಚು |
ತಾಸೆಯಿಂದೀಕ್ಷಿಪನಾಳ ||
ಈ ಸಲ ಸಿಕ್ಕಿತೆಂದೆಳೆದ | ಸ್ವಲ್ಪ |
ಮೋಸವೆನ್ನುತ ಮಗುಳೆಸೆದ || 1 ||
ಮೀನು ಬಿದ್ದುದ ಕಂಡನೊಂದ | ಎಳೆ |
ದೇನಿದದ್ಭುತ ದೊಡ್ಡದೆಂದ ||
ಮಾನಿನಿಯಳ ಬಳಿ ಬಂದ |
ಬಾರೆ ಕಾಣೀಯೂಟವ ಬಡಿಸೆಂದ || 2 || 142 ||

**ಭಾಮಿನಿ**
ಅಚ್ಚರಿಯೊಳೀಕ್ಷಿಸುತ ಮತ್ಸ್ಯವ |
ಕೊಚ್ಚುತಿರಲದರುದರದೊಳಗಾ |
ತುಚ್ಛವೆಂದೆಸೆದಿರ್ದ ಮುಸಲದ ಶೇಷ ಕಾಣಿಸಿತು ||
ಬೆಚ್ಚಿ ಬೇಡನು ನೆನೆದ ಮೃಗಗಳ |
ನೆಚ್ಚುತರಿಯಲಿದಾಯ್ತು ತನಗೆಂ |
ದಿಚ್ಚಿಸಿದನೊಂದಂಬಗೈದನು ಸವೆದು ಹದಗೊಳಿಸಿ || 1 || 143 ||

**ಕೇದಾರಗೌಳ - ಅಷ್ಟ**
ಋಷಿಶಾಪ ಯಾದವ ಮಸಣವೆಂದುದ ಕೇಳಿ |
ವ್ಯಸನದೊಳಿರೆ ಕೃಷ್ಣನು ||
ಹಸನಾಯ್ತು ದುರ್ವ್ಯಸನಿಗಳೆ ದುಃಖಿಪಿರೇಕೆ |
ಮುಸಲಕೀಗಳುತಿಹಿರಾ || 1 ||
ತಪಸಿಗಳಿರವ ನೀವರಿತಿರೆ ಮಕ್ಕಳೆ |
ಅಪಕೃತ್ಯದುಪಹತಿಗೆ ||
ಸಪರಿವಾರಿಗಳಾಗಿ ಪೋಗಿ ಪ್ರಭಾಸಕೆ |
ಉಪಶಮನವು ದಾನದಿ || 2 || 145 ||

**ಕಾಂಬೋಧಿ - ಝಂಪೆ**
ಯಾದವರು ಶ್ರೀ ಹರಿಯ ಪಾದಕಾನತರಾಗಿ |
ಆದುದಪರಾಧ ನಮ್ಮಿಂದ ಗೋವಿಂದ ||
ಸಾದರದಿ ಸಲಹುವುದು ಪಾಪಕರ್ಮಿಗಳೆಮ್ಮ |
ಆಧರಿಸಲಾರೆಯಾ ಯಾದವೋದ್ಧರಣ || 1 || 146 ||

**ನವರೋಜು - ಏಕ**
ಶಾಪವ ಮೀರಲೆಕರಿದು | ಜಯ |
ವಾಪುದೆ ಮೌನಿಗಳುರಿದು ||
ಪೋಪುದು ಪುಣ್ಯಕ್ಷೇತ್ರ ಪ್ರಭಾಸಕೆ |
ಪಾಪದ ಲೇಪವಿಲಾಪವ ತೊರೆಯಿರಿ || 1 || 147 ||

**ಕಾಂಬೋಧಿ - ಝಂಪೆ**
ಚರಣಕೊಂದಿಸುತ ಯದುವರರು ಪರಿವಾರ ಸಹ |
ತಿರುತಿರುಗಿ ದ್ವಾರಕಿಯ ನೋಡುತ್ತ ಪೊರಟು ||
ಬರೆ ಕೃಷ್ಣಸಂಸರ್ಗ ತಪ್ಪಿ ಪುನರಪಿ ಚಿತ್ತ |
ದಿರವೆ ಬೇರಾಯ್ತು ಋಷಿಶಾಪವಾವರಿಸಿ || 1 || 148 ||

**ಸಾಂಗತ್ಯ - ರೂಪಕ**
ಮದ್ಯಪಾನವ ಗೈದು ಸಾತ್ಯಕಿ ಸಾಂಬ ಪ್ರ |
ಸಿದ್ಧರು ಮಾರ್ಗ ತಪ್ಪಿದರು ||
ಉದ್ಧಟತನವೇರೆ ಅನಿರುದ್ಧ ಕೃತವರ್ಮ |
ರಿದ್ದರು ಸುರೆಯ ತೆಕ್ಕೆಯಲಿ || 1 || 149 ||

**ಸಾರಂಗ - ಅಷ್ಟ**
ತೂರಾಡಿ ತಿರುಗಿ ಸಾತ್ಯಕಿಯು | ಅಮ |
ಲೇರುತ ನುಡಿದನು ಕೃತವರ್ಮಾದ್ಯರೊಳು ||
ಮೋರೆಯ ನೋಡೆ ಹೇಸಿಕೆಯು | ಯಾವ |
ನಾರಿಯೊಲಿಯಲೀ ಮುಸುಡಿಯು || 1 ||
ಕೃತವರ್ಮನೆಂದನು ತೊದಲಿ | ನಿನ್ನ |
ಗತಿ ಮುಗಿಸುವೆನು ಭಾರತದಿ ||
ಪೃಥುವಿಪಾಲಕ ಭೂರಿಶ್ರವನ | ನೀನು |
ಹತಗೊಳಿಸಿದಿಯಲ್ಲೊ ಅಧಮ || 2 ||
ಕುರುಧರಣಿಯ ಯುದ್ಧಾಂತ್ಯದಲಿ | ನೀನು |
ಬೆರೆತಶ್ವತ್ಥಾಮ ಕ್ರೌರ್ಯದಲಿ ||
ಹೊರಲಾರದಾ ಪಾಪ ಹೊರೆಯು | ಗೋಣ |
ನರಿವುದು ಸಾತ್ಯಕಿಶರವು || 3 || 152 ||

**ಭಾಮಿನಿ**
ಋಷಿಗಳಿತ್ತಿಹ ಶಾಪ ಮದ್ಯ |
ವ್ಯಸನ ಯೌವನಬಲದ ಗರ್ವಕೆ |
ವಸುಧೆಯಂಜುವ ವೀರಯಾದವರೆರಡು ಥಟ್ಟಾಯ್ತು ||
ನಿಶಿತಶಸ್ತ್ರವ್ರಾತ ತೀರಲು |
ಮುಸಲಗಂಧದಿ ಪುಟ್ಟಿ ಬೆಳೆದಾ |
ಮಸೆಯ ಜೊಂಡನು ಕಿತ್ತು ಬಡಿದರು ಒಬ್ಬರೊಬ್ಬರನು || 1 || 153 ||

(ಇಲ್ಲಿ ಬೇರೆ ಬೇರೆ ಜೋಡಿಯುದ್ಧಗಳನ್ನು ಬಳಸಬಹುದು)

**ಕಂದ**
ಕಡಿದರು ಬಡಿದರು ನೀರೊಳು |
ಮಡಿದರು ಮುಳುಮುಳುಗಿ ನೀರ್ಗುಡಿದರೊಳು ಕೆಲಬರ್ ||
ಕೆಡಿಸಿತು ಸುರೆಮದ ಯೌವನ |
ನಡೆಸಿತು ಶೈಮಿನಿಗೆ ಯಾದವ ಪಡೆಯ ಕಡೆಗುಂ || 1 || 154 ||

**ಸಾಂಗತ್ಯ - ರೂಪಕ**
ಹತ ಯದುಸೇನೆಯ ಕಂಡನಿರುದ್ಧನ |
ಸುತ ವಜ್ರದೇವ ಸುಯ್ಲಿಡುತ ||
ಮೃತಶೇಷರನು ಕೂಡುತುದ್ವಿಗ್ನವದನ ಶ್ರೀ |
ಪತಿಯೆಡೆ ಬಂದ ಶೋಕಿಸುತ || 1 ||
ಎರಗಿದ ಕಂದನ ಎತ್ತಿ ಮುದ್ದಿಸಿ ಹರಿ |
ತರಳ ಯಾಕಳುವೆ ಪೇಳೆನಲು |
ಸುರೆಯ ಸೇವಿಸಿ ಕಡಿದಾಡಿ ಪ್ರಭಾಸದಿ |
ಮರಣವಪ್ಪಿದರು ನಮ್ಮವರು || 2 || 156 ||

**ಸೌರಾಷ್ಟ್ರ - ತ್ರಿವುಡೆ**
ಚಿಂತೆಗೊಳದಿರು ವಜ್ರ ಯಾದವ |
ತಿಂತಿಣಿಯು ಕಾಲಪ್ರವಾಹದಿ |
ಅಂತ್ಯಗೊಂಡುದು ಸಾಕು ಕಲಿಯುಗ | ಬಂತು ಮುಂದೆ || 1 ||
ಭಾರತಾಹವದಂತ್ಯದಲಿ ಗಾಂ |
ಧಾರಿ ಶಾಪವನಿತ್ತುದಕೆ ಋಷಿ |
ವಾರ ವಚನದ ಮುದ್ರೆ ನಾನಿರ | ಲಾರೆನಿನ್ನು || 2 ||
ತಾತ ನಿಮ್ಮಿಂದಭ್ಯುದಯದೀ |
ವ್ರಾತವಳಿದುದು ಪೋದೆಯಾದರೆ |
ಏತರದ ಬದುಕೆಮ್ಮ ನೀ ಸಂ | ಗಾತಲೊಯ್ಯೊ || 3 || 159 ||

**ಭೈರವಿ - ಝಂಪೆ**
ಕರ್ಮಭೂಮಿಯ ಕಾರ್ಯ ಕಳೆದುದೈ ಸುಕುಮಾರ |
ಧರ್ಮಾತ್ಮ ನೀನುಳಿದು ಪಾಲಿಸೀತಗಳ ||
ನಿರ್ವೀರ್ಯನಾಗದಿರು ಯದುವಂಶಕಿಹ ಶಾಪ |
ಸಾರ್ವ ದಿನ ಬಂತು ಸಿಂಹಾಸನವನೇರು ||1 ||
ಕೃಷ್ಣನಿಲ್ಲದ ರಾಜ್ಯ ಪರಿವಾರ ಸಿರಿ ಸಿಂಹ |
ವಿಷ್ಟರದಲೇನಿಹುದು ನಿನ್ನಾಶ್ರಯದಲಿ ||
ಸೃಷ್ಟಿಗೊಂಡುನ್ನತಿಯು ಮುರಿದು ಬಿದ್ದಿಹುದು ನಾ |
ನೆಷ್ಟರವನಿವರ ಪೊರೆಯಲಿಕೆ || 2 ||
ಭಕ್ತನಿರ್ದೆಡೆ ನೆಲಸಿ ನ್ಯಾಯಮಾರ್ಗದಿ ನಡೆವ |
ಶಕ್ತಿ ಸಲಹುವುದು ಕೊರಗದಿರು ||
ಶಕ್ತ ನೀನಹೆಯೆಂದೊಡಂಬಡಿಸಿ ದಾರುಕನ |
ಮುಕ್ತಿದಾಯಕ ಕರೆದು ಪೇಳ್ದ || 3 || 162 ||

**ಭಾಮಿನಿ**
ದಾರುಕನೆ ಕರೆತಾರೊ ಪಾರ್ಥನ |
ದ್ವಾರಕೆಯು ನಿರ್ನಾಮಗೊಳುವುದು |
ಮೂರು ದಿನದಂತರದೊಳೆಂದೊಡಬಡಿಸಿ ಕಳುಹಿದನು ||
ಮಾರಮಣ ನಿಶ್ಚಯಿಸಿ ತನ್ನವ |
ತಾರದುಪಸಂಹಾರಕಾರ್ಯವ |
ಸಾರುತಲಿ ವಟಕುಜದ ನೆರಳನು ಸೇರಿ ಪವಡಿಸಿದ || 1 || 163 ||

**ಸೌರಾಷ್ಟ್ರ - ಮಟ್ಟೆ**
ಬೇಟೆಯಾಡಿ ಬಂದ ಬೇಡ |
ಕೂಟವನ್ನು ಕೂಡಿ ಜರನು |
ಈಟಿ ಬಿಲ್ಲು ಬಾಣ ಬಲೆಗ |
ಳಾಟಗೈದು ನುಗ್ಗಿ ಬಡಿದು |
ಓಟಗೈವ ಮೃಗದ ಹಿಂಡ |
ಸೂಟಿನಿಂದಲೆಚ್ಚು ಕೆಡಹಿ || ಬೇಟೆ || 1 ||
ಮಿತ್ರರೆಲ್ಲರೊಟ್ಟು ಸೇರಿ |
ಮತ್ತೆ ಬೇರೆ ಬೇರೆಯಾಗಿ |
ಸುತ್ತ ತಿರುಗಿ ಹೊಂಚಿ ಹುಡುಕಿ |
ಮತ್ತೆ ನಾಯ 'ಛೂ' ಬಿಡುತ್ತ |
ಹುತ್ತ ಪೊಟರೆಗಿಣುಕಿ ನೋಡಿ |
ಕಿತ್ತು ಜೇನ ತಿಂದು ನಲಿದು || 2 ||
ಹರಿಯು ಮರದ ಮೂಲದೊಳಗೆ |
ಒರಗಿ ಕಾಲನಾಡಿಸುತ್ತ |
ಇರುವ ಪರಿಯು ಪ್ರಾಣಿ ಕಿವಿಯ |
ತೆರದಿ ತೋರೆ ಬೇಟೆಯೆಂದು ||
ಹರುಷಗೊಂಡು ಮತ್ಸ್ಯಗರ್ಭ |
ಶರವನೆಚ್ಚ ಗುರಿಯೊಳಿಟ್ಟು || 3 || 166 ||

**ಭಾಮಿನಿ**
ಮೋದದಾವೇಗದಲಿ ಬರುತ ವಿ |
ರಾಧ ಕಂಡನು ಬಾಣ ಕೃಷ್ಣನ |
ಪಾದದಂಗುಷ್ಟದಲಿ ನಾಂಟುತ ತೊಯ್ದ ರಕ್ತವನು ||
ಮೇದಿನಿಯೊಳವ ಬಿದ್ದ ಭಯದಿಂ |
ದಾಧರಿಸಿ ಮೇಲೆದ್ದ ತೊದಲಿದ |
ಆದುದೇ ಅಪರಾಧ ತನ್ನಿಂದಾದಿಮೂರುತಿಗೆ || 1 || 167 ||

**ಕಾಂಬೋಧಿ - ರೂಪಕ**
ಕೊಳಲನಾದದ | ಲಯಕೆ ಕುಣಿಯುವ ||
ಬಲಿಯ ತಲೆಯೊಳು | ಇಟ್ಟು ಮೆಟ್ಟಿದ ||
ಸಲಿಲದುದ್ಭವ | ಆದ ಪಾದಕೆ ||
ತಿಳಿಯದೀಪರಿ | ಬಾಣವೆಸೆದೆನು || 1 || 168 ||

**ಜಂಜೂಟಿ - ಅಷ್ಟ**
ಬಾರೆನ್ನ ಸನಿಹಕ್ಕೆ ಜರನೆ | ನೀನು |
ಪೂರಯಿಸಿದೆ ಎನ್ನಿಚ್ಛೆಯನೆ ||
ಧಾರಿಣಿಯನು ಬಿಟ್ಟು | ಸಾರುವ ಕಾರ್ಯದ |
ಕಾರಣವು ಋಷಿಶಾಪದಲಗಿದು |
ಸೇರುವಲ್ಲಿಗೆ ಸೇರಿತ್ತೈ ಬಿಡು || 1 ||
ನರನ ರಥವ ನೀನು ನಡೆಸಿರೆ | ಭೀಷ್ಮ |
ಕೆರಳಿ ನೊಸಲಿಗಸ್ತ್ರವೆಸೆದಿರೆ |
ಕರದಿ ಸುದರ್ಶನ | ಪಿಡಿದೆಯ ಭಜಿಸಲು |
ಕಿರುನಗೆಯೊಳವಗೊಲಿದೆ ಬಲ್ಲೆನು |
ಶರದೊಳಿರಿದಗೆ ಕ್ಷಮೆಯ ಶಿಕ್ಷೆಯೆ || 2 ||
ಶಿಕ್ಷೆರಕ್ಷೆಯ ಮಾತಿಲ್ಲಿಲ್ಲ | ಎನ್ನಾ |
ಪೇಕ್ಷೆಯು ಸಂತು ಸುಳ್ಳಲ್ಲ ||
ರಾಕ್ಷಸತ್ವವಿದಲ್ಲ | ಈಕ್ಷಿಸದೆಸೆದೆ ನೀ |
ಮೋಕ್ಷವನು ಪಡೆ ಪೋಪೆ ತಾನೆಂ |
ದಕ್ಷಿಯನ್ನೊರಸುತ್ತಲಪ್ಪಿದ || 3 || 171 ||

**ಸೌರಾಷ್ಟ್ರ - ತ್ರಿವುಡೆ**
ತಿಳಿಯಲಾರೆನು ನಿನ್ನ ತತ್ತ್ವವ |
ಸಲಹಬೇಹುದು ಸ್ವಾಮಿ ಪೋಪೆಯ |
ನೆಲೆಗೊಳಿಸು ಮಚ್ಚಿತ್ತದಲಿ ನಿ | ನ್ನೊಲವ ದೇವ || 1 ||
ಬದುಕು ಸದ್ಧರ್ಮದೊಳೆನಲು ಜರ |
ಪದುಮನಾಭಗೆ ನಮಿಸಿ ನೋಡುತ |
ಪದವನೆಳೆದೆಳೆದಿಡುತ ನಡೆದನು | ಹೃದಯ ತುಂಬಿ || 2 || 173 ||

**ಕಾಂಬೋಧಿ - ಝಂಪೆ**
ಯೋಗದಲಿ ಹಲಧರನು | ತ್ಯಾಗಗೈದಿಳೆಯ ಫಣಿ |
ಯಾಗಿ ತೆರಳಿದನುಳಿಯೆ ಪಾರ್ಥಿವಶರೀರ ||
ಭೋಗದಿಂ ಯಾದವರ ಮಾರಣವು ಶ್ರೀಕೃಷ್ಣ |
ನೀಗೆಲ್ಲಿ ಕಾಣೆನೆಂದಳಲಿ || 1 ||
ಹುಡುಕುತ್ತಲುದ್ಧವನು ಗಿಡವೃಕ್ಷ ಪ್ರಸ್ತರವ |
ನಡೆದು ಬಂದನು ಸ್ವಾಮಿ | ಅಡಗಿದೆಯ ಎಂದು ||
ಕಡೆಗೆ ಕಂಡನು ವೃಕ್ಷಮೂಲವಾಸಿಯ, ಕ್ಷಣಕೆ |
ಸಡಗರವನಾಂತ, ಗಾಯವ ಕಂಡ ನಡುಗಿ || 2 ||
ಬಾ ಎಂದು ಸನಿಹಕ್ಕೆ ಶ್ರೀಯರಸ ಕರೆದವನ |
ನೋಯಲೇತಕೊ ಕಾಲಖಂಡವೆನ್ನಿಚ್ಛೆ ||
ಆಯಿತಾಂ ಪೋಗುವೆನು | ಶ್ರೇಯವಾಗಲಿ ನಿಮಗೆ |
ತಾಯಿ ತಂದೆಯರಿಂಗೆ ಪೇಳೊ ವಾರ್ತೆಗಳ || 3 || 176 ||

**ಮಧ್ಯಮಾವತಿ - ಆದಿ**
ಶ್ರೀಪತಿ ಪ್ರೋಪೆಯ ನೀನೆಮ್ಮ ತೊರೆದು |
ಪಾಪದೀ ಕೂಪದಿ ಬದುಕುವುದೆಂತು || ಶ್ರೀಪತಿ ||
ಯಾದವೋದ್ಧರಣ ನೀ ನಿನ್ನೆದುರಿನೊಳು |
ಆದುದೆ ಸಂಪೂರ್ಣ ನಾಶ ಇವರದು ||
ಪಾದವನೂರುವ ಕಲಿಯಾರ್ಭಟೆಯನಿನ್ನು |
ಈ ಧರೆಯಲಿ ಕಾಂಬ ತಾಪವು ಬೇಡ || 1 ||
ಪರಮಪುರುಷ ನಿನ್ನ ಪರಮಪದಕೆ ಎನ್ನ |
ಕರೆದೊಯ್ಯೊ ಲೋಕದ ಕೊರಗು ಬೇಡೆನಗೆ ||
ದುರಹಂಕಾರದಿ ಬೆಂದು ಜರೆಮೃತ್ಯುಬಾಧೆಯಿಂ |
ಪರಿಭವಿಸುವ ಜನ್ಮಜನ್ಮಾಂತರವು ಬೇಡ || 2 || 178 ||

**ಬೇಗಡೆ - ಏಕ**
ಉದ್ಧವನೆ ಬರಿದೇಕೆ ಚಿಂತಿಸುವೆ | ಈ ಲೋಕಧರ್ಮವ |
ತಿದ್ದುವಡೆ ನಿನ್ನಿಂದಲಸದಳವೆ ||
ಶುದ್ಧಮನದಲಿ ಭಜಿಸಿ ಪಕ್ವತೆ |
ಹೊದ್ದಿ ನಡೆ ಸಂಸಾರವೃಕ್ಷದೊ |
ಳಿದ್ದ ಸುಖಫಲ ಮೆಲುವ ಜ್ಞಾನಿಯು |
ಉದ್ಧರವನೈದಿಸುವನಾತ್ಮನ || 1 ||
ಹರಿಯೆ ನಿನ್ನಯ ಚರಣದರುಶನವೆ | ಸದ್ಭಕ್ತನೋರ್ವಗೆ |
ಪರಮಪದವೆಂದಾನು ತಿಳಿದಿರುವೆ ||
ಭರಿತಮಾಯೆಯನೊಡ್ಡಿ ಲೋಕದಿ |
ವಿರಚಿಪೆಯ ಸೃಷ್ಟ್ಯಾದಿ ಕಾರ್ಯವ |
ಹರವಿರಂಚಿಗಳೆಲ್ಲರೆರಗುವ |
ಪರಮಪಾದದ ಸೇವೆ ಕರುಣಿಸು || 2 || 180 ||

**ಜಂಜೂಟಿ - ಅಷ್ಟ**
ಭೂಮಿಯೊಳ್ ನಿನ್ನ ಕರ್ತವ್ಯ | ಮುಗಿ |
ದಾ ಮೇಲೆ ನಿನಗೀವೆ ಮೋಕ್ಷಪದವಿಯ ||
ಕಾಮಾದಿ ವೈರಿಯ ಹತ್ತಿಕ್ಕಿ ಆನಂದ |
ಧಾಮದೆಡೆ ನಡೆಯಲ್ಕೆ ಯೋಗ್ಯನು |
ಸಾಮರಸ್ಯವ ಪಡೆವನಂತ್ಯದಿ || 1 ||
ಬದರಿಕಾಶ್ರಮಕೆ ಪೋಗುವುದು | ಕ್ಷೇತ್ರ |
ವಿದೆ ಸಮೀಪದೊಳಲಕಾನಂದೆ ನದಿಯು ||
ಬದುಕಲ್ಲಿ ಭಕ್ತಿಯ ಸಾರವ ಬೋಧಿಸಿ |
ಹೃದಯಶುದ್ಧರನೆಚ್ಚರಿಸಿ ಲೋ |
ಕದಲಿ ಜ್ಞಾನಾರ್ಜನೆಯ ಬೆಳಗಿಸು || 2 || 182 ||

**ವಾರ್ಧಕ**
ಬೋಧಿಸಿದ ಸಕಲ ತತ್ತ್ವಾರ್ಥಮಂ ಜ್ಞಾನ ಕ |
ರ್ಮಾದಿ ಮಾರ್ಗದಿ ಮೋಕ್ಷಸಾಧನೆಯ ಲಕ್ಷಣವ |
ಆದಿಪುರುಷನ ಸರ್ವಶಕ್ತಿಯಂ ಬಣ್ಣಿಸಿದ ಮೂರುತಿಯ ಧ್ಯಾನಸಹಿತ ||
ತಾ ಧರಿಸಿ ಸೃಜಿಪ ಲೋಕದ ಸರ್ವಮಾಯೆಯಿಂ |
ದಾದ ವಿಶ್ವರಹಸ್ಯದಾತ್ಮಮೀಮಾಂಸೆಯಂ |
ಸಾಧಕನ ಜ್ಞಾನಸಂಸಿದ್ಧಿಯಂ ಬುದ್ಧಿಯಂ ಸಿದ್ಧನಾದುದ್ಧವಂಗೆ || 1 || 183 ||

**ಸೌರಾಷ್ಟ್ರ - ತ್ರಿವುಡೆ**
ದೇವ ಪಾವನನಾದೆ ತವ ವಚ |
ನಾವಿಲಾಸವ ಕೇಳಿ ಪಾದುಕೆ |
ಈವುದದರಾಶ್ರಯವು ಧರ್ಮಾ | ಭಾವದಲ್ಲಿ || 1 || 184 ||

**ಭಾಮಿನಿ**
ನಕ್ಕು ಹರಿ ಕೈಯೊಡ್ಡಿ ನಿಂದಿಹ |
ಭಕ್ತನನು ತಕ್ಕೈಸಿ ಪಾದುಕೆ |
ಇಕ್ಕಿದನು ಪದಕೆರಗಿದಾತನ ಹರಸಿ ಬೀಳ್ಕೊಟ್ಟ ||
ಉಕ್ಕಿದುದು ದುಃಖಾಶ್ರು ಗದ್ಗದ |
ಬಿಕ್ಕಳಿಸೆ ತಿರುತಿರುಗಿ ಕಣ್ಣೆವೆ |
ಯಿಕ್ಕದೀಕ್ಷಿಸಿ ಪಾದುಕೆಯ ತಲೆಗಿಟ್ಟಳುತ ನಡೆದ || 1 ||

ಸಾಗಿದನು ಬದರಿಕೆಗೆ ಉದ್ಧವ |
ಯೋಗ ಯೋಗೇಶ್ವರನು ಧರಿಸೆ ವಿ |
ಯೋಗ ಧರಣೀದೇವಿಗಾಯಿತು ಕ್ಷೀರವಾರಿಧಿಗೆ ||
ಆಗಮನ ಸಂತಸವ ದೇವ ಗ |
ಣೌಘವಾಂತಿರೆ ಶಾಶ್ವತಸ್ಮಿತ |
ಆಗಮಸ್ತುತ ಭೌತದೇಹವ ನೀಗಿ ತೆರಳಿದನು || 2 || 186 ||

*ಸಂಧಿ 4 : ಯುಗಾಂತರ*

**ಸೌರಾಷ್ಟ್ರ - ತ್ರಿವುಡೆ**
ಸುಳಿದನಭ್ರುದಿ ಕಲಿಯು ನೋಡಿದ |
ಇಳೆಯ ಸಂಭ್ರಮಕಳುಕಿನಿಂದನು |
ಇಳಿದಿಳಿದು ನೆಲಕೂರಿ ಪಾದವ | ತಿಳಿಯುತೆಂದ || 1 ||
ಊರಿದೆನೆ ಪಾದವನು ಹರಿಯೀ |
ಧಾರಿಣಿಯ ತ್ಯಜಿಸಿದನೆ ಗೆದ್ದೆನು |
ಸಾರುವೆನು ಎನ್ನಯ ಪ್ರಭುತ್ವದಿ | ಗಾರುಗೊಳಿಪೆ || 2 ||
ಅಂತಕನ ಸುತನಾಳ್ವ ಧರಣಿಯ |
ದೆಂತು ಪರಿಕಿಪೆ ಮಾರುವೇಷವ |
ನಾಂತು ಪೋಗುವೆ ಧರ್ಮರಾಜ್ಯವ | ನಂತ್ಯಗೊಳಿಪೆ || 3 || 189 ||

**ವಾರ್ಧಕ**
ಪ್ರೌಢಳಾಗಿಹ ಸತಿಯ ತೇಜಿಯೊಳಗೇರಿಸುತ |
ಲೇಡಿಸುತ ಮುದಿತಾಯನೊದೆದು ಗಂಟನು ಹೊರಿಸಿ |
ಬಾಡಿ ಬಸವಳಿದಂತೆ ನಟಿಸಿ ಕುದುರೆಯ ನಡೆಸಿ ಬಾಡಬಂ ನಡೆತಂದನು ||
ನಾಡರ್ಕಳಿಕ್ಕೆಲದಿ ಬಾಯ್ಬಿಟ್ಟು ಬೆರಗಾಗೆ |
ಮೋಡಿಯಂ ಬೀಸಿದಂ ಧರ್ಮದಡಿಗಲ್ಲ ಮೀಂ |
ಟ್ಯಾಡಿಸಿದನಿದನೆಲ್ಲ ನೋಡಿದಂ ಚರನೋರ್ವನೋಡಿದಂ ನೃಪನ ಹೊರೆಗೆ || 1 || 190 ||

**ಸೌರಾಷ್ಟ್ರ - ತ್ರಿವುಡೆ**
ದಂತಿಪುರವಾಳುತ್ತ ಧರ್ಮಜ |
ಸಂತು ಮೂವತ್ತಾರು ವರುಷವು |
ಕಾಂತೆ ಸಹಜರ ಸಹಿತ ಲಕ್ಷ್ಮೀ | ಕಾಂತ ಭಜಕ || 1 ||
ಓಲಗದೊಳಿರೆ ದೂತನೈದುತ |
ಕಾಲಿಗೆರಗಿದ ಸ್ವಾಮಿ ಧರ್ಮದ |
ಮೂಲ ತಪ್ಪಿತು ಜನರು ಕೆಟ್ಟರು | ಕಾಲಗತಿಯೆ || 2 || 192 ||

**ಕಾಂಬೋಧಿ - ಝಂಪೆ**
ದೂತ ನೀನೆಂದುದೇ | ನೈ ತರಳತನದಿಂದ |
ಭೂತಳೇಶ್ವರ ಧರ್ಮ | ಸುತನ ರಾಜ್ಯದೊಳು ||
ಏತರದೊಳಪಚಾರ | ವಾಗುವಂತಿಲ್ಲ ಪೇ |
ಳಾತುದನ್ನೆಂದನಾ | ವಾತಸಂಭವನು || 1 || 193 ||

**ಯಮನ್ ಕಲ್ಯಾಣಿ - ಅಷ್ಟ**
ಧರ್ಮಾವತಾರರೆ ಕೇಳಿ | ಬಂತು |
ಧರ್ಮಬಾಹಿರರ ಪಾಳಿ || ಧರ್ಮಾವತಾರರೆ | ಪ ||
ಕುದುರೆಯೊಳೇರಿಸಿ ಸತಿಯ | ಬೈದು |
ಮುದಿತಾಯಿಗೇರಿಸಿ ಹೊರೆಯ ||
ಒದೆಯುತ ರಾಜಮಾರ್ಗದಲಿ | ಭೂವಿ |
ಬುಧ ಬಂದ ಹೊಲೆಯ ನೀತಿಯಲಿ || 1 || 194 ||

**ಕೇದಾರಗೌಳ - ಝಂಪೆ**
ಯಾರಿಂತು ಬಂದರಿಲ್ಲಿ | ಹಸ್ತಿನಾ |
ಧಾರಿಣಿಗೆ ಧೈರ್ಯವೆಲ್ಲಿ ||
ತೋರವನ ತೋರಣವನು | ಕಟ್ಟಿಸುವೆ |
ಬಾರೆಂದನಿಂದ್ರಸುತನು || 1 || 195 ||

**ಸುರುಟಿ - ಏಕ**
ದುಡುಕಬೇಡ ಪಾರ್ಥ | ಇದು ಕಲಿ |
ಯಡಿಯಿಟ್ಟುದರರ್ಥ ||
ನಡೆ ಭೀಮನೆ ಯಾ | ವೆಡೆಯಿಹನವನೆಂ |
ದೊಡಬಡಿಸುತ್ತೀ | ಯೆಡೆ ಕರೆತಾರೈ || 1 ||
ತೆರಳಿಸಿ ಪವನಜನ | ಯೋಚಿಸಿ |
ಹರಿಯಿರಲೀ ಹದನ ||
ಧರೆಯೊಳಸಾಧ್ಯವು | ತೊರೆದನೆ ಧರಣಿಯ |
ಕೊರಗೊಂದಾವುದೊ | ಕರೆದು ಕೊರೆಯುತಿದೆ || 2 || 197 ||

**ಭೈರವಿ - ಝಂಪೆ**
ಹರಿನಿರೂಪವ ಧರಿಸಿ ಶರಣ ಪಾರ್ಥನ ಸ್ಮರಿಸಿ |
ಸುರೆಯ ಮದದಿಂದೊರೆಸಿ ಪೋದವರ ನೆನಸಿ ||
ಪರಮಪುರುಷನು ತನ್ನ ತೊರೆವನೇನಕಟೆಂದು |
ಹರಿತಂದ ದಾರುಕನು ಹಸ್ತಿನಾಪುರಕೆ || 1 || 198 ||

**ಭಾಮಿನಿ**
ದಾರುಕನು ನಡೆತಂದು ಧರ್ಮಕು |
ಮಾರಗೆರಗಿದ, ಹರುಷದಿಂದ ವಿ |
ಚಾರಿಸಿದ ಸುಕ್ಷೇಮವೇ ಯಾದವಶಿರೋಮಣಿಗೆ ||
ಮೋರೆ ಕುಂದಿಹುದೇಕೆ ವಚನವಿ |
ಶಾರದನು ನೀ ಮೌನವೇಕೈ |
ಶ್ರೀರಮಣನೇನೆಂದ ಯಾದವರೊಳಿತ ಪೇಳೆಂದ || 1 || 199 ||

**ಕೇದಾರಗೌಳ - ಅಷ್ಟ**
ಯಾದವರಿನ್ನೆಲ್ಲಿ ಬಡಿದಾಡಿ ತಮ್ಮೊಳು |
ಹೋದರು ಯಮಪುರಿಗೆ ||
ಶ್ರೀಧವ ಪಾರ್ಥನ ಕರೆತಾರೊಯೆಂದೆನ್ನ |
ಈ ದಿಸೆಗೈದಿಸಿದ || 1 ||
ಮೂರುದಿವಸಪೋಗೆ ನೀರೊಳು ದ್ವಾರಕಿ |
ಸೇರುವುದೆಂದನಯ್ಯ ||
ಕಾರಣಿಕನ ಮನದಿರವೆಂತೊ ತಿಳಿಯೆನು |
ಬಾರಯ್ಯ ಪಾರ್ಥ ನೀನು || 2 || 201 ||

**ಮಧುಮಾಧವಿ - ಏಕ**
ಪೋಗಿ ಬಾ ಪಾರ್ಥ ನೀನೀಗ ದ್ವಾರಕಿಗೆ |
ಬೇಗುದಿಗೊಳಗಾದೆ ಹರಿಯ ಸಂಗತಿಗೆ ||
ಹೀಗೇಕೆ ಕಳುಹಿದ ನಡೆದ ದುಃಸ್ಥಿತಿಗೆ |
ಏಗೈವ ಮನಸಾಯ್ತೊ ಯಾದವೇಶ್ವರಗೆ || 1 || 202 ||

**ವಾರ್ಧಕ**
ವಂದಿಸುತ ಪಾರ್ಥ ದಾರುಕ ಸಹಿತ ಪೊರಮಡಲ್ |
ಬಂದ ಪವನಜ ಕಂಡನಾಗಂತುಕನ ಧರ್ಮ |
ಕಂದ ಬರಹೇಳೆಂದ ಬಾರೆಂದೊಡಂಬಡಿಸಿ ಕರೆತಂದನಾಸ್ಥಾನಕೆ ||
ನಿಂದು ದೂರದಿ ಕಾಲಪುರುಷ ಧರ್ಮಜ್ಞನಂ |
ಒಂದರೆಕ್ಷಣ ನೋಡಿ ಬೆಚ್ಚಿದಂ ಪದವಿಡಲ್ |
ಹಿಂದಾದ ಮಾಯಕದಿ ನಿಲ್ಲಲಾರದೆ ನೈಜ
ರೂಪವಾಂತಿರೆ ಕಂಡನು || 1 || 203 ||

**ಭೈರವಿ - ಝಂಪೆ**
ಬಾರಯ್ಯ ದೂರದಲಿ ನಿಂತಿರುವಿಯಳುಕೇಕೆ |
ಹಾರುವನ ವೇಷದಪಚಾರ ನಿನಗೇಕೆ ||
ಯಾರೆಂದು ತಿಳಿಯೆ ನಾ ಈ ರೂಪವಪರೂಪ |
ಕಾರಿಯವದೇನೆಮ್ಮ ನಾಡಿನಲಿ ನಿನಗೆ || 1 ||
ನಮೊನಮೋ ಧರ್ಮಸುತ ಕಲಿಕಾಲಪುರುಷನಾ |
ಕ್ಷಮಿಸು ತಪ್ಪಾಯ್ತು ನಾ ಪರಿಕಿಸಲು ಬಯಸಿ ||
ಭ್ರಮೆಗೊಳಿಸಿದೆನು ಪ್ರಜಾವರ್ಗವೆಲ್ಲವ ನಿನ್ನ |
ಕ್ಷಮೆಯೊಳೆನೆ ಕೇಳುತಚ್ಚರಿಯವನ್ನಾಂತು || 2 ||

ಆಸನವನಿತ್ತು ಸತ್ಕರಿಸುತ್ತ ವಿನಯದಿಂ |
ದೀ ಸಂಧಿಕಾಲದಲಿ ಬಂದೆ ನೀನೇಕೆ ||
ಶ್ರೀಶಸ್ಥಾಪಿತವಾದ ಸದ್ಧರ್ಮಸಾಮ್ರಾಜ್ಯ |
ನಾಶಗೊಳಿಸುವ ಮನವು ನಿನಗೇಕೆ ಪೇಳು || 3 ||
ಎನ್ನಕ್ಷಿಯಲಿ ಧರಣಿ ಬನ್ನಬಡುವುದ ಕಾಂಬು |
ದುನ್ನತಿಕೆಯೇ ನಿನಗೆ ಪೇಳು ಕಲಿರಾಯ ||
ಚೆನ್ನಾಯ್ತು ಕಾಲಗತಿಯನ್ನು ಧಿಕ್ಕರಿಸಲ್ಕೆ |
ಎನ್ನಿಂದ ಸಾಧ್ಯವೇ ನಿನ್ನಿಚ್ಛೆ ಎಂತೊ || 4 || 207 ||

**ನವರೋಜು - ಏಕ**

ಅಂತಕಜಾ ನಯಚತುರ | ನಿ |
ನ್ನಂತರಿಯ ಬಹು ಸಹಜ ||
ಸಂತಸವಾಯಿತು ಸದ್ಧರ್ಮೇಂದ್ರನೆ |
ಮುಂತೈತಂದಿಹ ಕಾಲವು ನನ್ನದು || 1 ||
ಸಂಧಿಯ ಕಾಲದಿ ಭುವಿಗೆ | ನಾ |
ಬಂದರೆ ಸಾಧನೆಯ ಬಗೆ ||
ಅಂದಗೊಳುವುದೆಂದೈದೆನು ತವಮನ |
ಬಂದಿಚ್ಛೆಯ ಕೇಳೈ ನಾ ಸಲಿಸುವೆ || 2 ||
ಬರದಿರು ಎನ್ನಾಳ್ವಿಕೆಯ | ಈ |
ಧರಣಿಗೆ ಬೇಡುವೆ ಜೀಯ ||
ಕರುಣಿಸು ನೀನೆನಲಸ್ತು ಎನುತ ಕಲಿ |
ತೆರಳಿದ ಧರ್ಮಜನಂತ್ಯವ ಕಾಯಲು || 3 || 210 ||

**ಕಂದ**

ದಾರುಕ ಪಾರ್ಥರು ಬರುತಿರೆ |
ದ್ವಾರಾವತಿ ಮಸಣದಂತೆ ತೋರ್ದುದು ಕಣ್ಣೀರ್ ||
ಧಾರೆಯೆ ಹರಿದಿರೆ ಕೃಷ್ಣನ |
ವಾರತೆಯರಿಯುತ್ತ ಮೂರ್ಛಿಸುತ್ತೆದ್ದಾಗಂ || 1 || 211 ||

**ಮಧುಮಾಧವಿ - ತ್ರಿವುಡೆ**

ಎದ್ದು ನೋಡಿದ ದ್ವಾರಕಾವತಿ |
ಯದ್ದುವುದು ನೀರೊಳಗೆ ದುಃಖವ |
ಹೊದ್ದಿಹರು ಸ್ಥಿತಿಯರಿಯದಿವರನು |
ಉದ್ಧರಿಪುದೆಂತೀಗಲು || 1 ||
ಹರಿಯ ಮೃತದೇಹವನು ಹುಡುಕುತ |
ಬರುತ ಕಂಡನು ದುಃಖ ತಡೆಯದೆ |
ಮರಳಿ ಬೀಳುತ ಶವವನಪ್ಪುತ |
ಹೊರಳುತೆಂದನು ಮೋಹದಿ || 2 ||
ಕುರುರಣಾಂಗಣ ಕರಚಮತ್ಕೃತಿ |
ಗರಸ ಬಾ ಬಾ ದೇವ ಗೀತೆಯ |
ನರುಹು ಮೋಹವನುರುಹು ದುಷ್ಟರ |
ಮುರಿಯಬಾರೈ ಕೃಷ್ಣನೆ || 3 || 214 ||

**ಕಾಂಬೋಧಿ - ಝಂಪೆ**

ತಿಳಿದ ತನ್ನಂತರದಿ ಗೀತಾರ್ಥಮಂ ಪಾರ್ಥ |
ಇಳೆಯ ರಂಗದ ಪಾತ್ರ ಮುಗಿಸಿ ತೆರಳಿದನು ||
ಅಳಲೇತಕೆಂದು ತನ್ನಲಿ ತಾನೆ ಸಾಂತ್ವನವ |
ಗೊಳುತ ಚಿತೆಯಂಗೈದ ಹಲಿಕೃಷ್ಣರಿಂಗೆ || 1 ||
ವಸುದೇವ ಮೊದಲಾದ ಪಿರಿಯರತಿದುಃಖದಲಿ |
ವಸುಮತಿಯೊಳೊರಗಿದರು ಕೃಷ್ಣಾSS ಎಂದಳಲಿ ||
ಅಸುವ ತೊರೆದರು ಚಿತೆಯನೇರ್ದವರ ಸುದತಿಯರು |
ದೆಸೆಗಾಣದಳಲಿದರು ಕಿರಿಯ ಬಾಲಕರು || 2 || 216 ||

**ವಾರ್ಧಕ**
ಪಟ್ಟಮಹಿಷಿಯರೆಲ್ಲ ಚಿತೆಯನೇರಲು ಪಾರ್ಥ |
ನಿಟ್ಟುಸಿರ ಬಿಡುತ ತನ್ನಲಿ ತಾನೆ ಬೇಯುತಲಿ |
ಒಟ್ಟುಗೂಡಿಸಿ ಕಷ್ಟದಿಂದೆಲ್ಲ ದ್ವಾರಕಿಯ ಬಿಟ್ಟು ಪೊರಡುವುದೆಂದನು ||
ಪುಟ್ಟಿ ಬೆಳೆದಾ ನೆಲನ ಬಿಡಲಾರದವರೆಲ್ಲ |
ದಿಟ್ಟಿಸುತ ತಂತಮ್ಮ ಮನೆಗಳಿಂದಳುತ ಪೊರ |
ಮಟ್ಟರೆಲ್ಲರು ನಾರಿವೃಂದ ಸಹ ಯಮುನೆಯನ್ನುತ್ತರಿಸೆ ಪುರ ಮುಳುಗಿತು || 1 || 217 ||

**ಕೇದಾರಗೌಳ - ಅಷ್ಟ**
ನಡೆದ ಮುಂದಕೆ ಪಾರ್ಥ ಯಾದವಾನೀಕವ |
ನೊಡಗೊಂಡು ಕರಿಪುರಕೆ ||
ಬಿಡದಿಯ ನಿರ್ಮಿಸಿ ನಿಶಿಯನು ಕಳೆಯಲೊಂ |
ದೆಡೆ ತಂಗಿದರು ಸರ್ವರು || 1 ||
ಚೋರರು ಸನಿಹದಿ ಕಾರ್ಯಾಗಾರವ ಗೈದು |
ಪಾರುಪತ್ಯದೊಳಿರಲು ||
ವಾರತೆಯರಿತರು ಧನವ ಸಂಗ್ರಹಿಸುವ |
ಕಾರಿಯ ಸುಲಭವೆಂದು || 2 || 219 ||

**ಮಾರವಿ - ಏಕ**
ಕನ್ನವನಿಕ್ಕುವ ಕನಕಭಂಡಾರಕೆ |
ಬನ್ನಬಡಿಸುತೆಲ್ಲರ ||
ಕನ್ನಿಕೆಯರ ಪಿಡಿದೊಯ್ಯುವ ಬನ್ನಿರೊ |
ಬನ್ನಿ ಎನ್ನುತ ಮುತ್ತಲು || 1 ||
ರೋದಿಪ ಸತಿಯರ ಕಂಡನು ಪಾರ್ಥನು |
ಕ್ರೋಧದಿ ಬಿಲುಗೊಂಡು ||
ಬಾಧಿಪಿರೇತಕೆ ಬಿಡಿ ಧೂರ್ತರೆ ನಿ |
ಮ್ಮೀ ಧರೆ ಹೊರಳಿನ್ನು || 2 ||
ಕೇಳುವ ನೀನ್ಯಾರೆಲೊ ಸಂಭಾವಿತ |
ಪೇಳುವುದೇನೆಮಗೆ ||
ಪೇಳಿದ ತೆರದಿಂ ಕೇಳುತ ಕಾಲಿಗೆ |
ಪೇಳೆಲೊ ಬುದ್ಧಿಯನು || 3 || 222 ||

**ಕೇದಾರಗೌಳ - ಅಷ್ಟ**
ಮೂರ್ಖರೆ ಸಾಮಾನ್ಯನೆಂದರಿತಿರೆ ಮೂರು |
ಲೋಕವಿಜಯಿ ನರನು ||
ಕಾಕುಕಜ್ಜವ ಗೈವ ಕಳ್ಳಕೊರಮರಿರ |
ಜೋಕೆ ಮುಂದಡಿಯಿಟ್ಟರೆ || 1 || 223 ||

**ಭೈರವಿ - ಏಕ**
ನರನಿಗೆ ಕೋಡೆಷ್ಟಿಹುದು | ನಾವ್ |
ಕುರಿಗಳೆ ಮಾತಾಡದಿರು ||
ಹರಿಯಿರೆ ಪೌರುಷ ನಿನಗೆ | ನಾ |
ವರಿಯೆವೆ ಪೋಗೈ ಮನೆಗೆ || 1 ||
ಸಿಡುಕುತ ಕೋಪದಿ ನರನು | ಬಿಲ್ |
ದುಡುಕಲು ಮನಮಾಡಿದನು ||
ಪಿಡಿದೆತ್ತಲು ಗಾಂಡೀವ | ಕಾ |
ಲೆಡೆ ಬೀಳಲು ಬೆರಗಾದ || 2 ||
ಪಿಡಿಗಾಂಡೀವವ ಪಾರ್ಥ |
ನೀ ಪಡೆದಿಹ ಕೀರ್ತಿಯನರ್ಥ ||
ಬಿಡುಗಣ್ಣನ ಸುಕುಮಾರ | ಬಾ |
ಬಿಡಿಸಿಕೊಳ್ಳೆ ನಾರಿಯರ || 3 || 226 ||

**ಭಾಮಿನಿ**
ಕ್ರೋಧದಿಂದುರಿದೆದ್ದು ನಿಮಿಷದೊ |
ಳಾಧರಿಸಿದನು ಪಾರ್ಥ ಧನುವನು |
ಆದಿಮೂರ್ತಿಯ ನೆನೆದು ಧ್ಯಾನಿಸಿದನು ಮಹಾಸ್ತ್ರಗಳ ||
ಪೋದುದೆಲ್ಲವು ಸ್ಮೃತಿಪಟಲದಿಂ |
ದಾ ದಿವಿಜಗುರುಗಣಪಧೂರ್ಜಟಿ |
ಯಾದಿಶಕ್ತಿಯ ಮೂಲಮಂತ್ರವು ಬಾರದಿರೆ ಮರುಗಿ || 1 || 227 ||

**ನಾದನಾಮಕ್ರಿಯೆ - ರೂಪಕ**
ಎಲ್ಲಿಗೈದುವೀ ಮಹಾಸ್ತ್ರ |
ವೆಲ್ಲವೆನ್ನ ತೊರೆದು ಕಾಲ |
ಕಿಲ್ಲದಾಯ್ತು ಚೋರರಿವರ | ಕೊಲ್ಲದಾದೆನೆ ||
ಬಲ್ಲರೆನ್ನ ಪೆಸರ ಕೇಳಿ |
ಸೊಲ್ಲನೆತ್ತದಿಹರು ಲೋಕ |
ಮಲ್ಲನೆಂಬ ಕೀರ್ತಿ ಎನಗೆ | ನಿಲ್ಲದಾಯಿತೆ || 1 ||
ಭರತ ಭೂಮಿಯೊಳಗೆ ಮೆರೆವ |
ಧರಣಿಧರರನೊತ್ತಿ ಪಡೆದೆ |
ಕರವನೆರಡು ಬಾರಿ ಯಾಗ | ವಿರಚಿಸಿರ್ದವು ||
ಕುರುಮಹಿಯಲಿ ಕರ್ಣ ಭೀಷ್ಮ |
ಗುರು ತ್ರಿಗರ್ತ ನರಕಸುತರ |
ಧುರದಿ ಗೆಲಿದ ಶೌರ್ಯವಿಲ್ಲಿ | ಮೆರೆಯದಾಯಿತೆ || 2 || 229 ||

**ಆರ್ಯಸವಾಯಿ - ಏಕ**
ಧರಣೀತಲ ದಿಗ್ವಿಜಯ ಪರಾಕ್ರಮಿ |
ಸುರನರ ರಾಕ್ಷಸದಲ್ಲಣನೆ ||
ಶಿರ ಕೆಳಗಾಯಿತು ಬಿಲು ಕೆಳಗುರುಳಿತು |
ಧುರ ಸಾಕಾಯಿತೆ ಮಹರಾಯ || 1 || 230 ||

**ಮಾರವಿ - ಏಕ**
ಎಲೆ ಮೂರ್ಖರೆ ಗಾಂಡೀವದಿ ನಿಮ್ಮನು |
ಕೊಲಲಾರೆನೆ ನಾನು ||
ತೊಲಗಿರಿ ಸತಿಯರ ಬಿಟ್ಟೀ ಕ್ಷಣವೆಂ |
ದೆಳೆದಿಟ್ಟನು ಧನುವ || 1 ||
ಕಸಿದರು ಧನುವನು ನಿಶಿತಾಸ್ತ್ರಗಳ |
ನ್ನೆಸೆದರು ಪಾರ್ಥನಿಗೆ ||
ಬಸವಳಿದುರುಳಲು ಸ್ತ್ರೀಯರನೆಳೆದರು |
ಉಸಿರೆತ್ತಲು ಬಿಡದೆ || 2 || 232 ||

**ಸೌರಾಷ್ಟ್ರ - ತ್ರಿವುಡೆ**
ಯಾರೊ ಸ್ತ್ರೀಯರನೊಯ್ವ ಲಂಪಟ |
ಚೋರರಿರ ಪಿಡಿದಿವರ ಬದುಕುವ |
ದಾರಿ ನಾ ಬಿಡೆನೆಂದ ವಜ್ರಕು | ಮಾರ ತಡೆದು || 1 || 233 ||

**ಭೈರವಿ - ಅಷ್ಟ**
ಪೋರನೆ ನೀನೇನು ಗೈವೆಯ | ನಿಮ್ಮ |
ವೀರ ಮುಂದಾಳು ಮೂರ್ಛೆಯೊಳಿಹ |
ಮೂರು ದಿವಸ ಬಾಳು, ಯುದ್ಧವು | ಹಕ್ಕಿ |
ಹಾರಿಸಿದಂತಲ್ಲ ಕಠಿಣವು || 1 ||
ಕಳ್ಳರಿಂದುಪದೇಶ ಕೇಳಲು | ಬಂದ |
ನಲ್ಲವು ಸಾಯಿರೆಂದೆಚ್ಚಲು ||
ನಿಲ್ಲದಾದರು ವೀರನಹುದೆಂದು | ಮೆಲ್ಲ |
ಮೆಲ್ಲನೆ ಜಾರಲಟ್ಟುತ ಕೊಂದು || 2 || 235 ||

**ಭಾಮಿನಿ**
ನಾರಿಯರ ಸೆರೆಬಿಡಿಸಿ ವಜ್ರಕು |
ಮಾರನೆರಗಿದ ಬಂದು ಪಾರ್ಥಗೆ |
ಶೂರ ನೀನೆಂದಪ್ಪಿ ಹರಸಿದ ಹರುಷಮನನಾಗಿ ||
ವೀರತನ ಬಳಸಿದುದು ಕೃಷ್ಣನ |
ಕೋರಿಕೆಯ ಬರಿ ದೇಹ ಜರ್ಝರ |
ವಾರುಗತಿಯೆಂದಳಲಿ ಇಂದ್ರಪ್ರಸ್ಥಕೈತಂದ || 1 || 236 ||

**ವಾರ್ಧಕ**
(ಕಟ್ಟಿದಂ ವಜ್ರದೇವಂಗಿಂದ್ರಪ್ರಸ್ಥಪುರ |
ಪಟ್ಟಮಂ ಯದುಶಾಪ ಮುಗಿಯಿತಲ್ಲಿಗೆ ಪಾರ್ಥ |
ನೆಟ್ಟನೈದಿದ ವ್ಯಾಸರಾಶ್ರಮಕೆ ಕಂಡು ಮುನಿ ದಿಟ್ಟಿಸುತ ನೀನಾರೆನೆ ||
ನಿಟ್ಟುಸಿರ ಬಿಟ್ಟು ನಾ ಪಾರ್ಥನೆನೆ ಬೆರಗಾಗಿ |
ಕಟ್ಟಾಳು ನೀ ಸೊರಗಿ ಕಂಗೆಟ್ಟುದೇತಕೆನೆ |
ಕೆಟ್ಟೆನೈ ಕೃಷ್ಣನಿನ್ನಿಲ್ಲೆಂದಡವನೆಂದ ತೆರಳಿ ನೀವ್ ಪ್ರಸ್ಥಾನಕೆ )|| 1 || 237 ||

**ಭಾಮಿನಿ**
ವೇದವನು ವಿನ್ಯಾಸಗೊಳಿಸಿದ |
ಬಾದರಾಯಣ ಮುನಿಯು ಮಥಿಸಿದ |
ಸಾಧಕರ ಶೈಥಿಲ್ಯ ಯುಗದಂತರಕೆ ಕಾರಣವು |
ಆದಿಮೂರುತಿ ಕೃಷ್ಣನಾಗುತ |
ಸಾಧಿಸಿದ ದ್ವಾಪರದಿ ಧರ್ಮವ |
ಹೋದಯುಗವೆನ್ನಂತರಂಗದಿ ಹರಳುಗಟ್ಟುತಿದೆ || 1 || 238 ||

**ಕಾಂಬೋಧಿ - ಝಂಪೆ**
ಮುಂದೇನು ತನ್ನಿರವು ಎಂಬುದನ್ನರಿಯದೆಯೆ |
ಬಂದ ಕೃಷ್ಣ ಮುನೀಶನಾಶ್ರಮಕೆ ನರನು ||
ತಂದೆ ಸಲಹೆಂದೆರಗುತೆದ್ದು ಕೈಮುಗಿಯಲವ |
ಸಂದೇಹಮನನಾಗಿ ಕೇಳ್ದನೀಕ್ಷಿಸುತ || 1 || 239 ||

**ಕೇದಾರಗೌಳ - ಅಷ್ಟ**
ಯಾರಯ್ಯ ಬಂದೆನ್ನ ಪಾದಕ್ಕೆ ನಮಿಸಿದೆ |
ವೀರನ ಗುರುತಿಹುದು ||
ತೋರುವೆಯತಿಕೃಶನಾಗಿ ಸರ್ವಾಂಗವು |
ಈ ರೀತಿ ನಡುಗಲೇಕೆ || 1 ||
ತಿಳಿಯದಾದಿರೆ ಎನ್ನ ನಿಜವನಾ ನಿರ್ಭಾಗ್ಯ |
ಫಲದಂಕಮಲ್ಲನೆಂದು ||
ಇಳೆಯೊಳು ಪೆಸರೊಂದು ಕಾಲದೊಳ್ಪಡೆದ ದು |
ರ್ಬಲ ಕಳೇವರ ಪಾರ್ಥನು || 2 ||
ಅಹುದೆ ನೀ ಪಾರ್ಥನೆ ಗುರುತು ಸಿಗದು ಕಂದ |
ಬಹು ಬದಲಾದಿಯಲ್ಲ ||
ಸಹಜಪೌರುಷವೆಲ್ಲಿ ಕ್ಷಾತ್ರಕಳೆಯು ಕಾಣ |
ದಿಹುದೆಲ್ಲಿ ಮಾರಿಹೋಯ್ತು || 3 ||
ಶ್ರೀರಮಣನು ಪೋದ ನಮ್ಮನಗಲಿ ಯದು |
ವಾರವ ಕೂಡಿ ನಾನು ||
ಚೋರರೊಡನೆ ಸೋತೆ ದಾರುಣವೀ ಪರಿ |
ಕಾರಣವೇಂ ತಿಳಿಯೆ || 4 || 243 ||

**ವಾರ್ಧಕ**
ಬಾದರಾಯಣ ಮುನಿಪನರಿತೆಂದ ಹರಿಯಿಲ್ಲ |
ದಾದ ಗತಿ ಕಾಲಗತಿ ಮಗನೆ ಕಲಿಗಾಲದಲಿ |
ಮೇದಿನಿಯೊಳಿರಬೇಡಿ ಹರಿಸಹಿತ ತವಶಕ್ತಿ ಪೋದುದಕೆ ಚಿಂತಿಸದಿರು ||
ಭೂಧರಾಗ್ರಣಿ ಧರ್ಮಜಾತನಿಗೆ ಪೇಳು ನೀ |
ವೈದುವುದು ಉತ್ತರದ ದಿಸೆಯತ್ತ ಸ್ವರ್ಗಮಂ |
ಸಾಧಿಸಿರಿ ಬದುಕಬಾರದು ನೀವು ಧರ್ಮವಿಲ್ಲೆನಲೆರಗಿ ಬೀಳ್ಕೊಂಡನು || 1 || 244 ||

## *ಸಂಧಿ 5 : ಸ್ವರ್ಗಾರೋಹಣ*

**ಸಾಂಗತ್ಯ - ರೂಪಕ**
ಧರ್ಮಜಾದ್ಯರ ಕಂಡು ಪಾರ್ಥ ಪೇಳಿದ ಕೃಷ್ಣ |
ಕರ್ಮಭೂಮಿಯ ತೊರೆದಿಹುದ ||
ಧರ್ಮಿಷ್ಠರಿಗೆ ಕಾಲವಲ್ಲೆಂದ ಮುನಿ ನುಡಿ |
ಮರ್ಮಕೆ ನಾಂಟೆ ಭೂವರನು || 1 ||
ಅನುಜರೆಲ್ಲರ ಕೂಡಿ ಪೇಳಿದ ನಾನಿಂದು |
ನೆನೆದುದೇ ಮುನಿಕೃಷ್ಣವಚನ ||
ತನು ಸಹ ಸ್ವರ್ಗಾರೋಹಣಗೈವೆ ನಡೆಯುತ |
ಲೆನೆ ಸಹೋದರರೆರಗುತ್ತ || 2 ||
ನಾನು ಬರುವೆ ನಿಮ್ಮನಗಲೆನೆನುತ ಭೀಮ |
ಕ್ಷೋಣಿಪಗೆರಗಲಸ್ತು ಎನೆ ||
ನೀನಿಲ್ಲದೇನೆಂದು ಪಾರ್ಥನೊಪ್ಪಿಸೆ ಮಾದ್ರೀ |
ಸೂನುಗಳನುಸರಿಸಿದರು || 3 ||
ದ್ರುಪದಜೆಗಿದನೆಲ್ಲ ಪೇಳಿ ನೀ ಮೊಮ್ಮನ |
ಉಪಚರಿಸೆಂದ ಧರ್ಮಜನು ||
ಅಪಹಾಸ್ಯಗೈವಿರ ನಿಮ್ಮ ತೊರೆಯೆನೆನೆ |
ನೃಪನೊಪ್ಪಿದನು ಸಾಧ್ವಿನುಡಿಗೆ || 4 || 248 ||

**ಭಾಮಿನಿ**
ಕಳವಳಿಸುತ ಸುಭದ್ರೆ ಚಿತ್ರೆಯ |
ರಳಲುತಿರೆ ಸಂತೈಸಿ ಮೊಮ್ಮನ |
ನಿಲಿಸುವೆನು ಪಟ್ಟಕ್ಕೆ ನೀ ವಜ್ರಾದಿಗಳು ಸಹಿತ ||
ಕುಲವನುದ್ಧರಿಸುವ ಕುಮಾರರ |
ಸಲಹೆನುತ ಕರಕಿತ್ತು ಧರ್ಮಜ |
ಹಲವು ಯತ್ನಗಳಿಂದ ನಿಲಿಸಿದ ಕೃಷ್ಣನನುಜೆಯನು || 1 || 249 ||

**ಮಧುಮಾಧವಿ - ತ್ರಿವುಡೆ**
ಉತ್ತರಾಸುತನಿಂಗೆ ಪಟ್ಟವ |
ನಿತ್ತು ಸುಮುಹೂರ್ತದಲಿ ಭೂವರ |
ಮೊತ್ತವನು ಸಂತೈಸಿ ದಾನವ |
ನಿತ್ತ ನೃಪ ಬ್ರಾಹ್ಮಣರಿಗೆ || 1 || 250 ||

**ಕಾಂಬೋಧಿ - ಝಂಪೆ**
ಧೌಮ್ಯರಿಂಗೊಪ್ಪಿಸುತ ಪೇಳಿದನು ಮೊಮ್ಮನಿಗೆ |
ಧರ್ಮಕರ್ಮವನುಳಿಸು ಸಜ್ಜನರನೊಲಿಸು ||
ವರ್ಮವಿಡದಿರು ಪ್ರಜಾವರ್ಗದಲಿ ಸರ್ವಸುಖಿ |
ಸಮ್ಮಿಳಿತಗೊಳಲಧರ್ಮವನೆಸಗಬೇಡ || 1 ||
ಎಂತು ನಾನಾಳುವೆನೊ ತಾತ ನೀ ಪಾಲಿಸಿದ |
ದಂತಿಪುರವನು ನಿಮ್ಮ ಹರಕೆಯೇ ಬದುಕು ||
ಚಿಂತೆಯಿಂ ತಳಮಳಿಪ ಪ್ರಜೆಗಳಿಗೆ ಸಾಂತ್ವನವ |
ನೆಂತು ಪೇಳಲಿ ನಮ್ಮನಗಲಿ ಪೋಗುವಿರೆ || 2 ||
ಮರುಗದಿರು ಕುವರ ಶ್ರೀಹರಿಯ ನೆನೆಯುತಲಾಳು |
ಪಿರಿಯ ಧೌಮ್ಯಾದಿಗಳ ಮತವನನುಸರಿಸು ||
ಹರಿಪೌತ್ರ ವಜ್ರನನು ಮಿತ್ರತ್ವದಲ್ಲಿರಿಸಿ |
ಮೆರೆ ಸೌಖ್ಯದೊಳಗೆಂದೊಡಂಬಡಿಸಿ ಪೊರಟ || 3 || 253 ||

**ಸಾಂಗತ್ಯ - ರೂಪಕ**
ಪೊರವಂಟರೈವರು ದ್ರುಪದಜೆ ಸಹಿತಲಿ |
ಪರಿತಪಿಸುವರ ಸಂತೈಸಿ |
ಬರುತಲಿಕ್ಕಡೆ ನಿಂತು ಕಣ್ಣೀರ ಧಾರೆಯ |
ಸುರಿಸುವ ಪ್ರಜೆಗಳಿಗೆಂದ || 1 ||
ಮುಂದೆ ಪರೀಕ್ಷಿತನಾಳುವನೀತನ |
ಹೊಂದಿ ನೀವ್ ಬಾಳಿರಣ್ಣರಿರ ||
ತಂದೆ ತಾಯಿಯರಂತೆ ಸೋದರ ಸುತರಂತೆ |
ಕುಂದ ತಿದ್ದುವುದೆಂದು ನಡೆದ || 2 || 255 ||

**ವಾರ್ಧಕ**
ಕರಿಪುರದ ಹೊರವಲಯಕೈತಂದು ಪಿಂತಿರುಗಿ |
ಎರಗಿದರು ಕೋಟೆ ಕೊತ್ತಲ ನಗರ ಸಂಪದಕೆ |
ಬರುವೆವೌ ಹಸ್ತಿನಾಸಾಮ್ರಾಜ್ಯಸಿರಿ ನೀನು ಪಾಲಿಸಿದೆ ಬಹುಭೂಪರ ||
ಬರಲಾರದೂರಿಂಗೆ ತೆರಳುವೆವು ನೀನೆಮ್ಮ |
ಹರಸುವುದೆನುತ್ತ ಪಿಂತಿರುಗಿ ನೋಡದೆ ಮುಂದ |
ಕಿರಿಸಿದರು ಹಜ್ಜೆಯಂ ತಿರುಗಿಸುತ ಮೊಮ್ಮನಂ
ಉತ್ತರದ ಮಾರ್ಗವಿಡಿದು || 1 || 256 ||

**ಬೇಗಡೆ - ಏಕ**
ನಡೆದು ಬಂದರು ದಾಟಿ ನದಿ ನದವ | ಧರ್ಮಜ್ಞ ಋಷಿಗಳ |
ಅಡಿಗೆರಗಿ ಕಾಲ್ನಡಿಗೆಯಿಂ ವನವ ||
ಮೃಡದಿಶಾಮುಖಿರಾಗಿ ಪರ್ವತ |
ಗಡಣಗಳ ದಾಂಟುತ ಪರಾಶರ |
ರೆಡೆಗೆ ಬಂದು ನಮಸ್ಕರಿಸಲಾ |
ವೆಡೆಯವರು ನೀವೆನಲು ಪೇಳ್ದರು || 1 ||
ತನುಜರಾವು ಮಹೀಶ ಪಾಂಡುವಿಗೆ | ಜೀವಂತ ಸ್ವರ್ಗವ |
ಅನುಭವಿಪ ಮನಮಾಡುತೀ ಎಡೆಗೆ ||
ವನಿತೆ ದ್ರೌಪದಿ ಸಹಿತ ಬಂದೆವು |
ಮುನಿಪ ಹರಸುವುದೆಂದು ನಮಿಸಲು |
ಜನಪನನು ಹತ್ತಿರಕೆ ಕರೆಯುತ |
ಲೆನಿತನೆಂದ ಪರಾಶರವ್ರತಿ || 2 ||
ನೀ ಪಡೆವೆ ಸ್ವರ್ಗವ ಸದೇಹದಲಿ | ನಿನ್ನನುಜರಿಂಗಿದು |
ಆಪುದಲ್ಲವು ಗತಿಸುವರು ಪಥದಿ ||
ತಾಪಗೊಳದಿರು ಕ್ರಮಿಸು ಮಾರ್ಗವ |
ಶ್ರೀಪತಿಯು ತೋರುವನು ಸತ್ಪಥ |
ಪೋಪುದೆಂದವ ಹರಸಲೆರಗುತ |
ಲಾ ಪುರುಷರೈದಿದರು ಮುಂದಕೆ || 3 || 259 ||

**ವಾರ್ಧಕ**
ಪಿಂದೋರ್ವ ಗಂಧರ್ವ ವಿಧಿಶಾಪ ಪಡೆದು ದನು |
ವೆಂದೆಂಬ ನಾಮದಿಂ ದೀರ್ಘದೇಹವ ಬೆಳೆಸಿ |
ಬಂದು ನಿಂದನು ಕೋಟಿ ಪರ್ವತದ ಸಾನುಪ್ರದೇಶದಲಿ ಮುನಿನಿಕರವ ||
ಕೊಂದು ಮದದಿಂದುಬ್ಬಿ ಯಜ್ಞಕುಂಡವ ಕಂಡ |
ರೊಂದೆ ನೆಗೆತಕೆ ನೆಗೆದ ಭಕ್ಷಿಸಿದ ಸಿಕ್ಕವರ |
ನೊಂದು ಭಯದಿಂದೋಡಿ ತಲೆಮರೆಸಿಕೊಂಡಿರ್ದರಲ್ಲಿರುವ
ಋಷಿಪ್ರಮುಖರು || 1 || 260 ||

**ಸೌರಾಷ್ಟ್ರ - ತ್ರಿವುಡೆ**
ಸಾನುವಿಗೆ ಮೆಯ್ಯಾಚಿ ಮಲಗುವೆ |
ಪ್ರಾಣಿಗಳು ಬರೆ ತಿಂದು ತೇಗುವೆ |
ತಾನೆನುತ ಬಿದ್ದಿರ್ದ ಪರ್ವತ | ಶ್ರೇಣಿಯಂತೆ || 1 ||
ಬರುತ ಕಂಡರು ಮೃತ್ಯುರೂಪನ |
ದುರುಳ ಮಾರ್ಗಕ್ಕಡ್ಡ ಬಿದ್ದಿಹ |
ಪರಿಕಿಸೇನೆಂದರಸ ಭೀಮನೊ | ಳರುಹೆ ಬಂದು || 2 || 262 ||

**ಭೈರವಿ - ಝಂಪೆ**
ಯಾರು ನೀನೆಮಗೀಗ | ದಾರಿಯನು ಬಿಡು ಮುಂದೆ |
ಸಾರುವೆವು ದೂರ ಸರಿ ಬೇಗ ||
ಘೋರರೂಪವು ಮಿಸುಕದಿರೆ ಪರೀಕ್ಷಿಪೆನೆಂದು |
ವೀರಮಾರುತಿಯೊದೆದನವಗೆ || 1 ||
ಸಿಕ್ಕಿದಿರ ನೀವಾಗಿ ಬಂದೆನ್ನ ತುತ್ತಾಗಿ |
ಮುಕ್ಕುವೆನು ಮಾಂಸ ಮಜ್ಜೆಗಳ ||
ನೆಕ್ಕುವೆನು ನೆತ್ತರನು ಯಾರೆನ್ನನೊದೆದವನು |
ಸೊಕ್ಕಿನವ ಬಾ ಮೊದಲು ಮಿಕ್ಕವರು ಮತ್ತೆ || 2 || 264 ||

**ಮಾರವಿ - ಏಕ**
ದಾನವ ತಿನ್ನಲು ಕಾನನ ತಿರುಗುವ |
ಪ್ರಾಣಿಗಳಾವಲ್ಲ ||
ಮಾನವರೊಳಗತಿಬಲನಾ ಶತಗಜ |
ತ್ರಾಣಿಯು ಬಿಡು ಪಥವ || 1 ||
ಶತಗಜಗಳ ನಾ ತಿನ್ನುತ ಜೀರ್ಣಿಸಿ |
ದತಿಬಲ ಮನುಜರಿಗೆ ||
ಪಥವನು ಬಿಡುವೆನೆ ಸಿಕ್ಕಿದೆ ಭೋಜ್ಯವೆ |
ನುತ ಮುಂದೈತರಲು || 2 || 266 ||

**ಶಂಕರಾಭರಣ - ಮಟ್ಟೆ**
ಗಾಳಿಯಣುಗ ತಡೆದು ಖಳ ನಿ |
ವಾಳಿಸೆನುತ ಮುಷ್ಟಿಯಿಂದ |
ಮೂಳೆ ಮುರಿಯುವಂತೆ ಬಡಿದ | ಖೂಳನಂಗಕೆ || 1 ||
ಕ್ರುದ್ಧನಾಗಿ ದನುಜನಿವನ |
ಗುದ್ದಲದನು ತಪ್ಪಿಸುತ್ತ |
ತಿದ್ದಿ ಮತ್ತೆ ಪ್ರಹರಿಸಿದನು | ಬಿದ್ದನೆದ್ದನು || 2 || 268 ||

**ಭಾಮಿನಿ**
ಕಾದಿದರು ಸಮಬಲದಿ ಭೀಮನ |
ಕ್ರೋಧವಿಮ್ಮಡಿಸಿತ್ತು ರಾಕ್ಷಸ |
ಗಾದುದಪಜಯ ಮಲ್ಲಯುದ್ಧದಿ ಮರಳಿ ಬಸವಳಿದ ||
ಮೇದಿನಿಯೊಳವನುರುಳೆ ಮೂರ್ಛೆಯ |
ನಾಧರಿಸಿ ಪವಮಾನಿ ದುರುಳನು |
ಸಾಧಕಾಂತಕನೆಂದು ಬಿಗಿದನು ಭೂಜಕಾತನನು || 1 || 269 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**
ಹರಿಯೆ ಶಾಪವು ಎರಗಿ ಕಥಿಸಿದ |
ಅರಿಯೆ ಪಾಂಡವರೆಂದು ಪವನಜ |
ತರುವಿಗೆನ್ನನು ಕಟ್ಟೆ ಶಾಪವು |
ಹರಿದುದೈ ವಿಧಿವಚನವು | ಗಂಧರ್ವ ನಾನು || 1 ||
ನಮಿಸುತಾಶಿಷವಾಂತು ದಿವ್ಯಕೆ |
ಗಮಿಸಿದನು ಗಂಧರ್ವ ದ್ರುಪದಾ |
ರಮಣರೈದಿದರಿತ್ತ ಸ್ವರ್ಗದ |
ಗಮನವಿರಿಸುತ ಕಷ್ಟದಿ | ಗಿರಿಯನೇರಿ || 2 || 271 ||

**ಕೇದಾರಗೌಳ - ಅಷ್ಟ**
ಯಮಸುತಾದಿಗಳೆಲ್ಲ ಕ್ರಮಿಸುತ ಮಾರ್ಗವ |
ಹಿಮವಂತನೆಡೆಗೈದಲು ||
ಸಮವರ್ತಿ ಶುನಕರೂಪವನಾಂತು ಮುಂದೆಸೆ |
ಗಮಿಸುತ ಪಥದೋರಿದ || 1 ||
ಹೆಪ್ಪುಗಟ್ಟಿತು ರಕ್ತ ಯಾಜ್ಞಸೇನಿಗೆ ಹಿಮ |
ವಪ್ಪಳಿಸಿತು ತತ್ತರ ||
ಧೊಪ್ಪೆಂದು ಬಿದ್ದು ತನ್ನರಸರ ಕರೆದು ಸಾ |
ವಪ್ಪೆ ಶೀತೋತ್ಕರ್ಷದಿ || 2 || 273 ||

**ಕಾಂಬೋಧಿ - ಝಂಪೆ**
ಅಗ್ನಿಸಂಭವೆ ದೇಹ ತ್ಯಜಿಸೆ ಭೀಮಾದಿಗಳು |
ಕುಗ್ಗಿ ಕುಳಿತಳುತವಳ ಗುಣವ ವರ್ಣಿಸುತ ||
ಸಗ್ಗಗಮನವ ತೊರೆದು ಪೋದೆಯಾ ಬಾಯೆಂದು |
ಒಗ್ಗೊರಲಿನಿಂದ ದುಃಖಿಸಲು || 1 ||
ಮರುಗದಿರಿ ಭರತಭೂಮಿಯ ನರರ ಯಜ್ಞಕ್ಕೆ |
ಎರೆದಳಾಜ್ಯವನೀಕೆ ಮೊದಲೆ ಪೋಗಿಹಳು ||
ಪೊರಡಿರೆನ್ನುತ ತಿರುಗಿ ನೋಡದೆಯೆ ಪೋಗುತಿಹ |
ಧರಣಿಪನನನುಸರಿಸಲು || 2 ||

ಸಹದೇವ ಸಹಿಸದಾದನು ಕುಳಿರಗಾಳಿಯನು |
ಸಹಸವುಡುಗಿತು ಕಾಲು ಕೀಳಲರಿದಾಯ್ತು ||
ತಹತಹಿಸಿ ಹಲ್ಲು ನಾಲಗೆ ಕಚ್ಚಿ ಕಣ್ಬಿಟ್ಟು |
ಮಹಜ್ಞಾನಿಯೊರಗಿದನು ನೆಲಕೆ || 3 ||
ಹಾ ತ್ರಿಕಾಲಜ್ಞಾನಿ ಸಹಚಾರಿ ಸಹದೇವ |
ಈ ತೆರದ ಮರಣ ನಿನಗೇತಕ್ಕೈ ತಮ್ಮ |
ನೀ ತಿಳಿಯದಾದೆಯಾ ನಿನ್ನಂತ್ಯ ಹಿಮವಂತ |
ಶೀತಗೊಳಿಸಿದನಲ್ಲೊ ವಾತಾವರಣವ || 4 || 277 ||

**ಭಾಮಿನಿ**
ಬಲ್ಲನೀತನು ಭೂತ ಭವಿತಾ |
ದ್ಯೆಲ್ಲವನು ತಿಳಿಸದೆಯೆ ಕೆಡಿಸಿದ |
ಸಲ್ಲದಿವನೊಳು ದೈನ್ಯ ಬನಿರೆಂದರಸ ಪೊರವಂಟ ||
ನಿಲ್ಲದಾದನು ನಕುಲನಳಿಯಲು |
ಚೆಲ್ವನೆಂಬಭಿಮಾನ ಕೊಂದುದು |
ಬಲ್ಲರಿದಕಳುಕುವರೆ ಪೋಪುದೆನುತ್ತ ಮುನ್ನಡೆದ || 1 || 278 ||

**ಸಾಂಗತ್ಯ - ರೂಪಕ**
ಕುಂತೀಕುಮಾರರು ದೃಢಮನದಲಿ ಹಿಮ |
ವಂತನನೇರಿ ಮುನ್ನಡೆಯೆ ||
ಬಂತು ಮೃತ್ಯುವು ಮೂರು ಲೋಕದ ವಿಜಯಗೆ |
ನಿಂತನೊಂದೆಡೆ ಕಾಲು ಸೆಟೆದು || 1 ||
ಮುಂದಡಿಯಿಡದಿರೆ ಭೀಮನಾತನ ಪೊತ್ತು |
ಬಂದನಣ್ಣನನನುಸರಿಸಿ ||
ಒಂದರೆಕ್ಷಣದಲಿ ಸಂದುದಾತನ ಜೀವ |
ವೆಂದರಿ ತಿಳಿಸಿ ದುಃಖಿಸಿದ || 2 ||
ಹರಿಯೆ ಸಾರಥಿ ವಜ್ರಧರ ತಂದೆ ಧರ್ಮಜ್ಞ |
ಪಿರಿಯಣ್ಣ ಯಮನ ಕುಮಾರ ||
ಕುರುರಣಾಂಗಣದ ನಾಯಕ ಶರಪಂಡಿತ |
ಮರಣವೆಂತಿವಗಣ್ಣ ಪೇಳು || 3 || 281 ||

**ವಾರ್ಧಕ**
ಮೂಲೋಕದಲ್ಲಣಂ ತಾನೆಂದು ಜಗದ ಬಿ |
ಲ್ಲಾಳುಗಳ ಹೀಗಳೆದನಿವನಹಂಕಾರಿ ಜಯ |
ಓಲೈಸಿತೆನ್ನನೆಂದರಿತನದರಿಂ ಮೃತ್ಯುವಾಯ್ತಿವಗೆ ಮರುಕ ಬೇಡ ||
ಕಾಲಗತಿಯಲಿ ತೃಣಮಹತ್ವಹುದು ಶ್ರೀಹರಿಯ |
ಲೀಲೆಯಲಿ ಬಂದು ಸಂದನು ಮನಃಸ್ಥೈರ್ಯದಿಳಿ |
ಗಾಲ ಸಲ್ಲದು ಸಾಕು ಬಾರೆಂದೊಡಂಬಡಿಸಿ ಮುಂದೈದಲನುಸರಿಸಿದ || 1 || 282 ||

**ಶರ ಷಟ್ಪದಿ || ಆರ್ಯಸವಾಯಿ - ಏಕ**
ಗಿರಿಯನ್ನೇರುತ | ಕೊರೆಯುವ ಕುಳಿರನು |
ಪರಿಗಣಿಸದೆ ಮುಂದೈತರಲು ||
ಕುರುಸಂಹರ ದು | ರ್ಧರ ಸ್ಥಿತಿಗೈದಿದ |
ಕರಗಿತು ಶತಗಜ ಬಲವೆಲ್ಲ || 1 || 283 ||

**ಕೇದಾರಗೌಳ - ಅಷ್ಟ**
ನಡೆಯಲಾರದೆ ಭೀಮ | ನಡುಗಿ ಮೂರ್ಛೆಯೊಳಿರೆ |
ನಡೆದನರಸ ಮುಂದಕೆ ||
ನಡುಗಿತಾತನ ಮನಃಸ್ಥೈರ್ಯ ವ್ಯಾಮೋಹದಿಂ |
ದುಡುಗಿ ನೋಡಿದ ಪಿಂದಕೆ || 1 ||
ಬಂದಪ್ಪಿಕೊಳೆ ವಾತಕಂದಗೆ ಪ್ರಾಣವು |
ಸಂದುದನರಿತು ಕುಂದಿ ||
ಕಂದ ಬಾ ನಿನ್ನೆಡೆ ಬಂದಳೆಂತೈ ಮೃತ್ಯು |
ಕುಂದುಂಟೆ ನಿನ್ನೊಳಿಂದು || 2 ||
ಮಗಧ ಕೌರವ ಹಿಡಿಂಬಕ ಬಕ ಕೀಚಕ |
ರುಗಳ ಬಗೆದನಲ್ಲವು ||
ಸುಗುಣಿ ಬಾರೆಂದಾರ್ತನಾದದೊಳಾ ಜ್ಞಾನಿ |
ಪೆಗಲೊಳೇರಿಸೆ ಶವವ || 3 ||

ದಿವಕೆ ಶವವನೊಯ್ಯುತಿರೆ ಕಂಡು ಶುನಕರೂ |
ಪವನಾಂತ ಸಮವರ್ತಿಯು ||
ಭುವಿಸುರನಾದನು ಭುಮೆಯನು ಕಳೆಯಲು |
ಭುವನೇಶಾಗಮ ಪಥದಿ || 4 || 287 ||

**ಕಂದ**
ತರು ಒಣಗಿದೆ ಕಟ್ಟೆಯೊಳದ |
ನಿರಿಸಿಹ ತಲೆ ಕೆಳಗೆ ನೀರನೆತ್ತುವನುಣಿಸಲ್ ||
ದೊರೆಯದು ಪಾತ್ರೆಗೆಯದು ಸಾ |
ಸಿರರಂಧ್ರ ತಿರುಗುವ ಕೂಪದ ಬುಡಕು ಗಿಡಕುಂ || 1 || 288 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**
ಹೆಗಲ ಕುಣಪದ ರಾಯ ನಕ್ಕನು |
ಹಗರಣವಿದೇನ್ ಮೂರ್ಖ ಬ್ರಾಹ್ಮಣ |
ಚಿಗುರುವುದೆ ಒಣ ವೃಕ್ಷವೀ ಘಟ |
ಮೊಗೆವುದೆಂತೈ ನೀರನು | ಮರುಳೆ ನಿನಗೆ || 1 ||
ಅರರೆ ಕುಣಪಿಗನಾರು ನೀನೀ |
ಗಿರಿಯನೇರುತಲೆಲ್ಲಿಗೈದುವೆ |
ಪರಿಕಿಸಲು ಶತಮೂರ್ಖ ಸುಡಲಿಕೆ |
ಉರಿಯು ಸಿಗದೀ ಕಡೆಯೊಳು | ಹಿಮಗಿರಿಯಲಿ || 2 ||
ಕಿರಿಯನೀತನನೊಯ್ವೆ ಸ್ವರ್ಗಕೆ |
ಬರಿದು ಯತ್ನವಿದಲ್ಲ ನಿನಗೇಂ |
ಮರುಳೆ ನೀರೆರೆಯಲ್ಕೆ ಕಾಷ್ಠ ಚಿ |
ಗುರುವುದೇನೈ ವಿಪ್ರನೆ | ಬರಿಯತ್ನವೇಕೆ || 3 ||
ಹೆಣವು ತಮ್ಮನೆ ಸ್ವರ್ಗ ಮಸಣವೆ |
ಮನುಜ ಮೋಹಕೆ ಮೋಕ್ಷವೆಂತೈ |
ಇನಿತು ಸರಿ ಒಣ ತರುವ ಬದುಕಿಪು |
ದೆನಿತು ಕಷ್ಟದ ಕಾರ್ಯವು | ಮರುಳುತನವೆ || 4 || 292 ||

**ಭಾಮಿನಿ**
ಕಪಟವಿಪ್ರನ ಮಾತು ಮೋಹದ |
ಉಪಹತಿಯನರ್ಥೈಸೆ ತನ್ನಿಂ |
ದಪಕೃತವಿದೆಂದೆಸೆದು ಮುಂದಡಿಯಿಟ್ಟನೇಕಾಂಗಿ ||
ತಪನಸಂಭವ ತನ್ನ ಮಾಯೆಯ |
ನುಪಹರಿಸಿ ಮೊದಲಂತೆ ಮುನ್ನಡೆ |
ದಪನು ಬಂದರು ವೈತರಣಿಯೆಡೆ ನಾಯು ನರಪತಿಯು || 1 || 293 ||

**ಜಂಜೂಟಿ - ಅಷ್ಟ**
ದೇವರಥದಿ ತ್ರಿದಿವೇಶ | ಕಂಡ |
ನೀ ವಿಧ ಸಾಹಸ ಮನುಜ ವಿಶೇಷ ||
ಸಾವುನೋವುಗಳನ್ನುತ್ತರಿಸುತ್ತ ಸ್ವರ್ಗದ |
ಠಾವನರಸಿಯಜಾತಶತ್ರುವು |
ದೇವತನಕೈದಿದ ಸದೇಹದಿ || 1 ||
ಏರು ಬಾ ರಥವ ಎನ್ನೊಡನೆ | ಧರ್ಮ |
ವೀರ ನೃಪರೊಳಗ್ರೇಸರನೆ ||
ಧಾರಿಣಿಯೊಳು ಸತ್ಯ ಧರ್ಮ ನಿಷ್ಠೆಯ ಕರ್ಮ ||
ತೋರಿ ನಳ ಭರತಾದಿ ನೃಪರಿಂ |
ನೂರು ಮಡಿ ಸ್ವರ್ಗಕ್ಕೆ ಸ್ವಾಗತ || 2 ||
ಧ್ವನಿಯನಾಲಿಸಿ ಸ್ಥಿತಪ್ರಜ್ಞ | ಕಂಡ |
ಕನಕರಥವನು ಧರ್ಮಜ್ಞ ||
ವಿನತನಾದೆನು ನಿನ್ನ | ಮನದಂತೆ ರಥವೇರ್ವೆ ||
ಶುನಕವಿದು ಮೊದಲೇರಲೆನ್ನನು |
ಅನುಸರಿಸಿ ಬಂದಿಹುದ ತೊರೆಯೆನು || 3 || 296 ||

**ಕಾಂಬೋಧಿ - ಝಂಪೆ**
ಮರ್ತ್ಯವನು ಗೆಲಿದು ಮತ್ಸ್ವಮತೆಯಂ ಸಾಧಿಸಿದ |
ಸತ್ಯವಂತನು ನೀನು ತಿರ್ಯಗ್ಜೀವನವ ||
ಉತ್ತರಿಸಲಾರದಿಹ ಶುನಕ ಸಮವೇನೈ ಮ |
ಹತ್ವಪೂರ್ಣರ ಸ್ವರ್ಗ ನಾಯಿ ಹೊಗಲರಿದು || 1 ||
ಹಂದಿಯಾಗಿಹ ಹರಿಯು ನಿಂದ್ಯನೇನೈ ಸುರಪ |
ಹಿಂದೊಂದು ಹರಿಭಕ್ತ ಗಜಕಾಯ್ತು ಮೋಕ್ಷ ||
ಕುಂದು ನಂಬಿದರನ್ನು ತೊರೆಯುವುದು ಕಷ್ಟ ಸುಖ |
ಬಂದರೆಮ್ಮೀರ್ವರಿಗು ಒಂದಾಗಲೆಂಬೆ || 2 ||
ಶ್ವಾನವಂತರಿಗೆಲ್ಲಿ ಸ್ವರ್ಗಲೋಕದಿ ತಾಣ |
ಹೀನ ಖಾದ್ಯವ ಕಂಡರಲ್ಲಿಳಿವ ಪ್ರಾಣಿ ||
ಮಾನಿಸುವಿಯೇಕೆ ಸುಜ್ಞಾನಿ ತೊರೆದರೆ ಪಾಪ |
ವೇನಿಲ್ಲ ತಮ್ಮದಿರ ತೊರೆದವನು ಪಥದಿ || 3 || 299 ||

**ಸಾಂಗತ್ಯ - ರೂಪಕ**
ಹಗೆ ಗೆಳೆತನವೆಲ್ಲಿ ಮೃತರಾದನುಜರಲ್ಲಿ ||
ಸೊಗವೆ ತೊರೆವುದೀ ಶುನಕನ ||
ನಿಗಮಸಿದ್ಧವು ಬ್ರಹ್ಮಹತ್ಯಕೆ ಸಮ ನಂಬಿ |
ದಗೆ ಮೋಸಗೈವುದಾಂ ಬಾರೆ || 1 ||
ತೊರೆದೆ ತಮ್ಮಂದಿರ ಕೃಷ್ಣೆಯ ಧರಣಿಯ |
ಸಿರಿಭೋಗ ಸದ್ವಸ್ತುಗಳನು ||
ಪಿರಿದಾದ ಸ್ಥಾನ ಕಾದಿರೆ ನಾಯ ಬಿಡೆನೆಂಬೆ |
ತೊರೆ ಕ್ರೌರ್ಯವಲ್ಲೇರು ರಥವ || 2 || 301 ||

**ಭಾಮಿನಿ**
ಬೇಡ ನಂಬಿದ ಶುನಕನಿಗೆ ಸ್ಥಳ |
ನೀಡದೀ ರಥ ಆತ್ಮಬಲಕೇಂ |
ಕೇಡೆ ಶುನಕಗೆ ಬೆದರದೈದಿತು ವೈತರಣಿಯನಕ ||
ರೂಢಿಗೊಗ್ಗದ ಕಾರ್ಯ ಬೇಡೆಂ |
ದಾಡಿ ವಂದಿಸಿ ಸುಡುವ ನದಿಯಂ |
ನೋಡಿ ಬೆದರದೆ ಬಂದಿಳಿದನುತ್ತರಿಪ ಮನದಿಂದ || 1 || 302 ||

**ಕಂದ**
ಸಿಡಿದುದು ನೀರಾ ಮತ್ರ್ಯನ |
ಸುಡುತಲಿ ಮೆಯ್ ಬೇಯೆ ರೂಪ ಕೆಟ್ಟುದು ತರಣಿಜ ||
ಬಿಡು ಛಲ ಶ್ವಾನದ ರೂಪವ |
ಪಡೆದವ ತಾನೆಂದು ತೋರಿ ನಿಜವನು ನುಡಿದಂ || 1 || 303 ||

**ಮೋಹನ - ಅಷ್ಟ**
ಕುವರ ಏರೈ ರಥವ | ಪಾರ್ಥಿವಗೆ ಸಂ |
ಭವವಲ್ಲದೀ ಪಥವ ||
ದಿವಿಜೇಶನೊಡ್ಡಿದ ಕಠಿಣಪರೀಕ್ಷೆಗೆ |
ಸುವಿವೇಕದುತ್ತರದೆತ್ತರಕೈದಿದೆ || 1 ||
ಯಕ್ಷಪ್ರಶ್ನೆಯೊಳು ನಿನ್ನ | ಸದ್ಧರ್ಮ ಪ |
ರೀಕ್ಷೆಯೊಳ್ ಗೆದ್ದೆ ಮುನ್ನ ||
ದಕ್ಷನೆನ್ನಿಸಿ ಪ್ರಜಾರಕ್ಷೆಯೊಳದನೀಗು |
ಪೇಕ್ಷಿಸಿ ಸ್ವರ್ಗವ ಪಡೆದೆ ಸದೇಹದಿ || 2 || 305 ||

**ಸೌರಾಷ್ಟ್ರ - ತ್ರಿವುಡೆ**
ತಿರುಗಿ ಧರ್ಮಜ ಪಿತನ ಪಾದಕೆ |
ಎರಗೆ ಸಿಂಚನದಮೃತ ಸ್ವಾಗತ |
ಸುರರು ಕರೆಯಲು ದಿವ್ಯದೇಹವ | ಧರಿಸುತೇರ್ದ || 1 ||
ಪಾಕಶಾಸನ ತೋರ್ದ ವಿಶ್ವದ |
ಲೋಕವೈಭವ ನರಕಶಿಕ್ಷೆಯ |
ನಾಕಕೈದುತ ಕಂಡನೆಲ್ಲರ | ನಾ ಕುನಾಥ || 2 || 307 ||

**ವಾರ್ಧಕ**
ಕಂಡ ಸ್ವರ್ಗದಿ ದಿವ್ಯದೇಹದಿಂ ಮೆರೆವ ಭೂ |
ಮಂಡಲೇಶ್ವರರ ತನ್ನನುಜರಂ ಕೃಷ್ಣೆಯಂ |
ಪಾಂಡುಧೃತರಾಷ್ಟ್ರಕೌರವಶಕುನಿಕರ್ಣರಂ ನಿರ್ವಿಕಾರದ ಮನದಲಿ ||
ಪುಂಡರೀಕಾಕ್ಷ ಧ್ಯಾನದೊಳೈಮನೊಳೈಕ್ಯಮಂ |
ಗೊಂಡನುಳಿದರು ತಮ್ಮ ಮೂಲರೂಪವ ಸೇರೆ |
ಕೊಂಡಾಡುತಮರೌಘ ಕೂಡಿ ಪಾಡಿದುದಲ್ಲಿ ಮಂಗಲವ ಪ್ರಸ್ಥಾನಗೆ || 1 || 308 ||

**ಮಂಗಲ :**
**ಮೋಹನ - ಏಕ**
ವಿದ್ಯಾದಾಯಿನಿ ಮಂಗಲಂ | ವಂದಿಪೆ ಬ್ರಹ್ಮ |
ನರ್ಧಾಂಗಿ ಶುಭಮಂಗಲಂ ||
ಸದ್ಧರ್ಮ ಚಾರಿತ್ರ್ಯ | ಹೊದ್ದುತೀ ಕಲೆಯಿಂದ |
ಉದ್ಧಾರಗೊಳುವಂತೆ |
ಸದ್ಧೈರ್ಯ ಕೊಡು ತಾಯೆ || 1 || 309 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಉಡುಪಿ ಯಕ್ಷಗಾನ ಕೇಂದ್ರ

**ಪ್ರಸಂಗ ಪ್ರತಿ ಆಧಾರ:** ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ  ಯಕ್ಷಗಾನ ಪ್ರಸಂಗ ಮಾಲಿಕಾ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀನಿಧಿ ಡಿ. ಎಸ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್.

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ